**ದಿನಾಂಕ 13-12-2013 ರಂದು ಶ್ರೀಮತಿ ಸಾಕಮ್ಮ ನಾಗರಾಜು, ಮಾನ್ಯ ಅಧ್ಯಕ್ಷರು, ಜಿಲ್ಲಾ ಪಂಚಾಯತ್, ತುಮಕೂರು ಇವರ ಅಧ್ಯಕ್ಷತೆಯಲ್ಲಿ ನಡೆದ ನವಂಬರ್-2013ರ ಮಾಹೆಯ ಕೆ.ಡಿ.ಪಿ. ಪ್ರಗತಿ ಪರಿಶೀಲನಾ ಸಭೆಯ ನಡವಳಿಗಳು.**

**ಸಭೆಯಲ್ಲಿ ಹಾಜರಿದ್ದವರು:**

1) ಶ್ರೀಮತಿ ಸಾಕಮ್ಮ ನಾಗರಾಜು, ಮಾನ್ಯ ಅಧ್ಯಕ್ಷರು, ಜಿ.ಪಂ. ತುಮಕೂರು
2) ಶ್ರೀ ವೈ.ಹೆಚ್.ಹುಚ್ಚಯ್ಯನವರು, ಮಾನ್ಯ ಅಧ್ಯಕ್ಷರು ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ, ಜಿ.ಪಂ.ತುಮಕೂರು
3) ಶ್ರೀ ಎ.ಬಿ.ಜಗದೀಶ್ ರವರು, ಮಾನ್ಯ ಅಧ್ಯಕ್ಷರು, ಆರೋಗ್ಯ ಮತ್ತು ಶಿಕ್ಷಣ ಸ್ಥಾಯಿ ಸಮಿತಿ, ಜಿ.ಪಂ.ತುಮಕೂರು
4) ಶ್ರೀ ಗೋವಿಂದರಾಜು, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿ.ಪಂ.ತುಮಕೂರು.

**ಜಿಲ್ಲಾ /ತಾಲ್ಲೂಕು ಮಟ್ಟದ ಅಧಿಕಾರಿಗಳು:-**

ಹಾಜರಾತಿ ವಹಿಯಂತೆ

+++

ಸಭೆಯ ಆರಂಭದಲ್ಲಿ ಮುಖ್ಯ ಯೋಜನಾಧಿಕಾರಿ ರವರು ಜಿಲ್ಲಾ ಪಂಚಾಯತಿಯ ಮಾನ್ಯ ಅಧ್ಯಕ್ಷರನ್ನು ಸಭೆಗೆ ಹೃತ್ಪೂರ್ವಕವಾಗಿ ಸ್ವಾಗತಿಸಿದರು. ನಂತರ ವಿವಿಧ ಸ್ಥಾಯಿ ಸಮಿತಿ ಅಧ್ಯಕ್ಷರುಗಳನ್ನು, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿರವರನ್ನು ಜಿಲ್ಲಾ/ ತಾಲ್ಲೂಕು ಮಟ್ಟದ ಅಧಿಕಾರಿಗಳು ಹಾಗೂ ಪತ್ರಿಕಾ ಮಾಧ್ಯಮದವರನ್ನು ಸಭೆಗೆ ಸ್ವಾಗತಿಸಿ, ಮಾನ್ಯ ಅಧ್ಯಕ್ಷರು, ಜಿಲ್ಲಾ ಪಂಚಾಯತ್ ರವರು ಸಭೆಯ ಅಧ್ಯಕ್ಷತೆ ವಹಿಸಿ ಸಭೆಯನ್ನು ನಡೆಸಿ ಕೊಡುವಂತೆ ಕೋರಿದರು.

ಮಾನ್ಯ ಅಧ್ಯಕ್ಷರು ಸಭೆಯಲ್ಲಿ ಹಾಜರಿದ್ದ ಮಾನ್ಯ ಸದಸ್ಯರು ಮತ್ತು ಅಧಿಕಾರಿಗಳನ್ನು ಮತ್ತೊಮ್ಮೆ ಸಭೆಗೆ ಸ್ವಾಗತಿಸಿ ಈ ಕೆಳಗಿನಂತೆ ಇಲಾಖಾವಾರು ಚರ್ಚೆ ಪ್ರಾರಂಭಿಸಿದರು.

ಅರಸು ವಂಶದ ಮೈಸೂರಿನ ಮಹಾರಾಜರಾದ ಶ್ರೀ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ರವರು ಅಕಾಲಮೃತ್ಯುವಿಗೆ ತುತ್ತಾದ ಮೇರೆಗೆ ಸಭೆಯು ಎರಡು ನಿಮಿಷಗಳ ಕಾಲ ಮೌನಾಚರಿಸುವುದರ ಮೂಲಕ ಸಂತಾಪ ಸೂಚಿಸಿತು.

**1) ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್:-**

ಅಧಿಕಾರಿಗಳು, ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ರವರು ಮಾತನಾಡಿ ಅಲ್ಪಾವಧಿ ಸಾಲದಡಿ ಭೌತಿಕವಾಗಿ ಶೇಕಡ 88 ಮತ್ತು ಆರ್ಥಿಕವಾಗಿ ಶೇಕಡ 73ರಷ್ಟು, ಮಧ್ಯಮಾವಧಿ ಸಾಲದಡಿ ಭೌತಿಕವಾಗಿ ಶೇಕಡ 63 ಮತ್ತು ಆರ್ಥಿಕವಾಗಿ ಶೇಕಡ 78ರಷ್ಟು ಪ್ರಗತಿ ಸಾಧಿಸಲಾಗಿದೆ ಎಂದು ಸಭೆಗೆ ತಿಳಿಸಿದರು.

ಅಧ್ಯಕ್ಷರು ಮಾತನಾಡಿ, ವಿವಿಧ ರೀತಿಯ ಸಾಲ ಮಂಜೂರಾತಿ ಮತ್ತು ಮರುಪಾವತಿ ಮಾನದಂಡಗಳ ಕುರಿತು ವಿವರ ಪಡೆದರು.

**2) ಕೃಷಿ:-**

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿರವರು ಮಾತನಾಡಿ ಮಳೆ ಮತ್ತು ಬೆಳೆಗಳ ಬಗ್ಗೆ ಮಾಹಿತಿ ನೀಡುವಂತೆ ಸೂಚಿಸಿದ ಮೇರೆಗೆ ಜಂಟಿ ನಿರ್ದೇಶಕರು, ಕೃಷಿ ಇಲಾಖೆರವರು ಮಾತನಾಡಿ 2013ರ ಸೆಪ್ಟೆಂಬರ್ ಮಾಹೆಯನ್ನು ಹೊರತುಪಡಿಸಿ ಆಕ್ಟೋಬರ್-ನವಂಬರ್ ಮಾಹೆಯಲ್ಲಿ ವಾಡಿಕೆಯಂತೆ ಮಳೆ ಬಾರದ ಕಾರಣ ಜಿಲ್ಲೆಯಲ್ಲಿ ಒಟ್ಟಾರೆ 133758ಹೆಕ್ಟೇರ್ ಬೆಳೆ ನಾಶವಾಗಿದ್ದು, ಈ ಕುರಿತು ಸರ್ಕಾರಕ್ಕೆ ವರದಿ ಮಾಡಲಾಗಿದೆ; ಮಳೆ ವೈಪಲ್ಯದಿಂದ ಈ ವರೆಗೆ ಕೇವಲ 5000ಹೇಕ್ಟೇರ್ ಮಾತ್ರ ಭಿತ್ತನೆಯಾಗಿದೆ; ಬೀಜ ಮತ್ತು ರಸಗೊಬ್ಬರಕ್ಕೆ ಯಾವುದೇ ಕೊರತೆ ಇರುವುದಿಲ್ಲ; ಬೆಳೆ ನಷ್ಟ ಪರಿಹಾರ ಮಂಜೂರಾತಿ ಕೋರಿ ಈಗಾಗಲೇ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ;

ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ ಅಧ್ಯಕ್ಷರು ಮಾತನಾಡಿ, NREGA ಕಾರ್ಯಕ್ರಮದಡಿ ಇಲಾಖಾವತಿಯಿಂದ ಯಾವ-ಯಾವ ಕೆಲಸಗಳನ್ನು ಕೈಗೊಳ್ಳಲಾಗಿದೆ ಎಂಬ ಬಗ್ಗೆ ಜಂಟಿ ಕೃಷಿ ನಿರ್ದೇಶಕರಿಂದ ಮಾಹಿತಿ ಪಡೆದರು.

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು ಮಾತನಾಡಿ, ಕಳೆದ 6-7 ತಿಂಗಳುಗಳಿಂದ MGNREGA ಕಾರ್ಯಕ್ರಮದ ಅಡಿ ನಿಗಧಿತ ಪ್ರಮಾಣದ ಗುರಿ ಸಾಧನೆಯಾಗಿಲ್ಲವೆಂದು ಆಕ್ಷೇಪ ವ್ಯಕ್ತಪಡಿಸಿ ಮುಂದಿನ ದಿನಗಳಲ್ಲಿ ಹೆಚ್ಚಿನ ಒತ್ತು ನೀಡಿ ಹೆಚ್ಚಿನ ಪ್ರಗತಿ ಸಾಧಿಸಲು ಸೂಚಿಸಿದರು.

ಮಾನ್ಯ ಅಧ್ಯಕ್ಷರು ಮಾತನಾಡಿ, ಮುಂಬರುವ ಗ್ರಾಮಸಭೆಗಳಿಗೆ ಅಧಿಕಾರಿಗಳು ಮತ್ತು ಜನಪ್ರತಿನಿಧಿಗಳು ಕಡ್ಡಾಯವಾಗಿ ಹಾಜರರಿರುವಂತೆ ಕ್ರಮಕೈಗೊಳ್ಳಲು ಸೂಚಿಸಿದರು;

ಶ್ರೀ ವೈ.ಹೆಚ್.ಹುಚ್ಚಯ್ಯರವರು ಮಾತನಾಡಿ, MGNREGA ಕಾಮಗಾರಿ ಬಿಲ್ಲು ಪಾವತಿಗೆ ತುರ್ತು ಅಗತ್ಯ ಕ್ರಮವಹಿಸುವಂತೆ ತಿಳಿಸಿದ ಮೇರೆಗೆ, ಉಪ ಕಾರ್ಯದರ್ಶಿ(ಅಭಿವೃದ್ಧಿ)ರವರು ಮಾತನಾಡಿ ಈಗಾಗಲೇ ಕ್ರಮವಹಿಸಿರುವುದಾಗಿ ತಿಳಿಸಿದರು.

ಸಭೆಯ ಮಾನ್ಯ ಅಧ್ಯಕ್ಷರು ಮಾತನಾಡಿ, ಪರಿಹಾರದ ಧನ ಕುರಿತು ಜಂಟಿ ಕೃಷಿ ನಿರ್ದೇಶಕರಿಂದ ಮಾಹಿತಿ ಪಡೆದರು.

**(ಕ್ರಮ: ಜಂಟಿ ನಿರ್ದೇಶಕರು, ಕೃಷಿ ಇಲಾಖೆ)**

**3) ತೋಟಗಾರಿಕೆ:-**

ಉಪ ನಿರ್ದೇಶಕರು, ತೋಟಗಾರಿಕೆ ರವರು ಮಾತನಾಡಿ ತಮ್ಮ ಇಲಾಖಾ ಕಾರ್ಯಕ್ರಮಗಳ ಪ್ರಗತಿ ವಿವರವನ್ನು ಸಭೆಗೆ ವಿವರಿಸಿದರು. ಮುಂದುವರೆದು ಮಾತನಾಡುತ್ತಾ MGNREGA ಅಡಿ 709 ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದ್ದು, ರೂ. 221.00 ಲಕ್ಷ ಅನುದಾನ ಪಾವತಿಸಲಾಗಿದೆ. 248 ಕಾಮಗಾರಿಗಳು ಪೂರ್ಣಗೊಂಡಿದ್ದು, 1162 ಕಾಮಗಾರಿಗಳು ಪ್ರಾರಂಭವಾಗಿರುತ್ತದೆ, ರೂ. 337.00 ಲಕ್ಷ ಅನುದಾನ ವೆಚ್ಚವಾಗಿರುತ್ತದೆ. ಫಲಾನುಭವಿಗಳಿಗೆ ಮಾವು, ಸಪೋಟ, ದಾಳಿಂಬೆ ಸಸಿಗಳನ್ನು ನೀಡಲಾಗುತ್ತಿದೆ. ಜೊತೆಗೆ ಗ್ರಾಮಠಾಣಾಗಳಲ್ಲಿ ಮನೆ ಮುಂದೆ ಬೆಳೆಸಲು ತೆಂಗಿನ ಸಸಿಗಳನ್ನು ನೀಡಲಾಗುತ್ತಿದೆ. MGNREGA ಅಡಿ ರೂ. 12.00 ಕೋಟಿ ಗಳ ಕ್ರಿಯಾ ಯೋಜನೆ ಅನುಮೋದನೆಯಾಗಿದ್ದು, ಸದರಿ ಕ್ರಿಯಾ ಯೋಜನೆಯಡಿ ಶೇಕಡ 60 ರಷ್ಟು ದೊಡ್ಡ ರೈತರನ್ನು ಸೇರಿಸುತ್ತಾರೆ, ಆದರೆ ಮಾರ್ಗಸೂಚಿಯಲ್ಲಿ ದೊಡ್ಡರೈತರಿಗೆ ಅವಕಾಶವಿರುವುದಿಲ್ಲವೆಂದು ಸಭೆಗೆ ತಿಳಿಸಿದರು.

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು ಮಾತನಾಡಿ, line departmentನ ಇಲಾಖಾಧಿಕಾರಿಗಳು ರೈತರಿಂದ ಸಣ್ಣ ಹಿಡುವಳಿ ದೃಢೀಕರಣ ಕೇಳಬಾರದು; ರೈತ ಸಂಪರ್ಕ ಕೇಂದ್ರದ ಮಾಹಿತಿ ಪಡೆದು ಅದನ್ನು ಗ್ರಾಮ ಪಂಚಾಯತಿಗೆ ಒದಗಿಸಿ ದೊಡ್ಡ ಹಿಡುವಳಿದಾರರ ಹೆಸರುಗಳನ್ನು ವಜಾಗೊಳಿಸುವಂತೆ ತಿಳಿಸಿ, ಸಂಬಂಧಪಟ್ಟವರಿಗೆ ಈ ದಿನವೇ ಸುತ್ತೋಲೆಯನ್ನು ಕಳುಹಿಸುವಂತೆ ಉಪ ಕಾರ್ಯದರ್ಶಿ (ಅಭಿವೃದ್ಧಿ) ರವರಿಗೆ ತಿಳಿಸಿದರು. ಮುಂದುವರೆದು ಗಂಗಾ ಕಲ್ಯಾಣ ಯೋಜನೆಯ SC/ST ಫಲಾನುಭವಿಗಳ ಪಟ್ಟಿ ಪಡೆದು ಸರ್ಕಾರದಿಂದ ಬಿಡುಗಡೆಯಾಗಿರುವ ಅನುದಾನವನ್ನು Maximum ಸದ್ಬಳಕೆ ಮಾಡಿಕೊಂಡು ಹೆಚ್ಚಿನ ಪ್ರಗತಿ ಸಾಧಿಸಬೇಕು ಎಂದು ಸಲಹೆ ನೀಡಿದರು.

ಸಭೆಯ ಅಧ್ಯಕ್ಷರು ಮಾತನಾಡಿ, ರೈತರಿಗೆ ಹನಿ ನೀರಾವರಿ ಬಗ್ಗೆ ಸ್ಪಷ್ಟ ಮಾಹಿತಿ ನೀಡುವಂತೆಯೂ ಹಾಗೂ ರೈತರಿಗೆ ಸುಧಾರಿತ ಅಡಿಕೆ ಸುಲಿಯುವ ಯಂತ್ರಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ಸರಬರಾಜು ಮಾಡಲು ತಿಳಿಸಿದರು.

**(ಕ್ರಮ: ಉಪ ನಿರ್ದೇಶಕರು, ತೋಟಗಾರಿಕೆ)**

**4) ಪಶುಸಂಗೋಪನೆ:-**

ಉಪ ನಿರ್ದೇಶಕರು, ಪಶುಸಂಗೋಪನಾ ಇಲಾಖೆರವರು ಪ್ರಗತಿ ವಿವರ ನೀಡಿದರು. ಮುಂದುವರೆದು ಮಾತನಾಡುತ್ತಾ, ಕಾಲುಬಾಯಿ ಜ್ವರದಿಂದ ಮೃತಪಟ್ಟ ರಾಸುಗಳ ಫಲಾನುಭವಿಗಳಿಗೆ ಪರಿಹಾರ ನೀಡಲು ಅನುದಾನ ಬಿಡುಗಡೆ ಕೋರಿ ಸರ್ಕಾರಕ್ಕೆ ಪ್ರಸ್ತಾವನೆ ಕಳುಹಿಸಲಾಗಿದೆ; ಅನುದಾನ ಬಿಡುಗಡೆಯಾದ ನಂತರ ಪಾವತಿಗೆ ಕ್ರಮವಹಿಸಲಾಗುವುದು; ರಾಸುಗಳ ಚಿಕಿತ್ಸೆಗಾಗಿ ಜಿ.ಪಂ.ನಿಂದ ರೂ.10.00ಲಕ್ಷ ಮತ್ತು ಜಿಲ್ಲಾಧಿಕಾರಿಯವರ ಪರಿಹಾರ ನಿಧಿಯಿಂದ ರೂ.20.00ಲಕ್ಷ ನೀಡಿರುತ್ತಾರೆ; ಹಾಗೂ ಸಂತೆ/ಜಾತ್ರೆ ನಿರ್ಬಂಧಕ್ಕೆ ಆದೇಶ ನೀಡಿರುತ್ತಾರೆ; ಬರಗಾಲದ ಹಿನ್ನೆಲೆಯಲ್ಲಿ ಕೃಷಿ ಇಲಾಖಾವತಿಯಿಂದ ಬೆಳೆ ಕ್ಷೇತ್ರ ವಿಸ್ತೀರ್ಣ ಪಡೆದು ಮೇವು ಉತ್ಪಾದನೆ ಅಂದಾಜು ಮಾಡಲಾಗಿದೆ; ಅದರಂತೆ 22 ರಿಂದ 23 ವಾರಕ್ಕೆ ಆಗುವಷ್ಟು ಮೇವು ಉತ್ಪಾದನೆ ಆಗುತ್ತದೆ; ಇದಕ್ಕಾಗಿ ಮೇವು ಬೀಜ ವಿತರಣೆಗಾಗಿ 16940 ಮಿನಿಕಿಟ್ ಗಳನ್ನು ವಿತರಣೆ ಮಾಡಲಾಗಿದೆ; ಹಾಗೂ 2012-13ನೇ ಸಾಲಿಗೆ ಗುರುತಿಸಲ್ಪಟ್ಟಿದ್ದ ತಾಲ್ಲೂಕು ಮತ್ತು ಹೋಬಳಿಗಳಿಗೆ 2 ಲಕ್ಷ ಟನ್ ಹಸಿರು ಮೇವು ಬೆಳೆಯಲು ಅಂದಾಜು ಮಾಡಲಾಗಿದೆ; ಪ್ರಸ್ತುತ 5 ತಾಲ್ಲೂಕುಗಳಿಗೆ 80 ಲಕ್ಷ ಮೊತ್ತದ ಮೇವು ಬೀಜ ಪೂರೈಕೆಗೆ ಪ್ರಸ್ತಾವನೆ ಸಲ್ಲಿಸಲಾಗಿದೆ ಎಂದು ತಿಳಿಸಿದರು.

ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯ ಅಧ್ಯಕ್ಷರು ಮಾತನಾಡಿ, SCP&TSP ಕಾರ್ಯಕ್ರಮದ ಕುರಿತು ಬ್ಯಾಂಕ್ ಅಧಿಕಾರಿಗಳೊಂದಿಗೆ ಸಮಾಲೋಚಿಸಿ ಜಿಲ್ಲಾ ಮಾರ್ಗದರ್ಶಿ ಬ್ಯಾಂಕ್ ವ್ಯವಸ್ಥಾಪಕರಿಗೆ ಮಾಹಿತಿ ಒದಗಿಸುವಂತೆ ತಿಳಿಸಿದರು.

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು ಮಾತನಾಡಿ, ಕಾಲುಬಾಯಿ ಜ್ವರ ರೋಗದ ಪರಿಣಾಮಕಾರಿ ನಿಯಂತ್ರಣಕ್ಕೆ ರಾಸುಗಳಿಗೆ ಇನ್ನೊಂದು ಬಾರಿ ಲಸಿಕೆ ಹಾಕಲು ಕ್ರಮವಹಿಸುವಂತೆ ಉಪ ನಿರ್ದೇಶಕರಿಗೆ ತಿಳಿಸಿದರು.

**(ಕ್ರಮ: ಉಪ ನಿರ್ದೇಶಕರು, ಪಶುಸಂಗೋಪನಾ ಇಲಾಖೆ/ ವಿಶೇಷ ಘಟಕ ಯೋಜನೆ/ ಗಿರಿಜನ ಉಪಯೋಜನೆ ಅನುಷ್ಠಾನಗೊಳಿಸುವ ಇಲಾಖೆಗಳ ಅಧಿಕಾರಿಗಳು)**

**5) ಕೆ.ಎಂ.ಎಫ್:-**

ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ ಮಾನ್ಯಅಧ್ಯಕ್ಷರು ಮಾತನಾಡಿ, ಕೆ.ಎಂ.ಎಫ್ ನ ಅಧಿಕಾರಿಗಳು ಸಭೆಗೆ ಗೈರು ಹಾಜರಾಗಿದ್ದ ಹಿನ್ನಲೆಯಲ್ಲಿ " ಅಮೃತ ಬಿಂದು ಯೋಜನೆ" ಯ ಕುರಿತು ವಿವರವಾದ ಮಾಹಿತಿಯನ್ನು ಪಡೆದು ಒದಗಿಸುವಂತೆ ಮುಖ್ಯ ಯೋಜನಾಧಿಕಾರಿಯವರಿಗೆ ತಿಳಿಸಿದರು.

**6) ಮೀನುಗಾರಿಕೆ:**

ಮೀನುಗಾರಿಕೆ ಹಿರಿಯ ಸಹಾಯಕ ನಿರ್ದೇಶಕರು ಯೋಜನೆವಾರು/ಲೆಕ್ಕಶೀರ್ಷಿಕೆವಾರು ಕಾರ್ಯಕ್ರಮಗಳ ಪ್ರಗತಿ ವಿವರ ನೀಡಿದರು. ಮಾನ್ಯ ಅಧ್ಯಕ್ಷರು ಮಾತನಾಡಿ, ಮೀನು ಕೃಷಿ ಹೊಂಡ ನಿರ್ಮಾಣಕ್ಕೆ ಎಷ್ಟು ಅನುದಾನ ನೀಡಲಾಗುತ್ತಿದೆ ಎಂದು ಪ್ರಶ್ನಿಸಿದಾಗ ಇಲಾಖಾಧಿಕಾರಿಯವರು ಮಾತನಾಡಿ, ಮೀನು ಕೃಷಿಹೊಂಡ ನಿರ್ಮಿಸಲು ಒಂದು ಎಕರೆಗೆ ರೂ.64,000/- ಹಾಗೂ ಒಂದು ಹೊಂಡಕ್ಕೆ 250 ಮೀನುಮರಿಗಳನ್ನು ಬಿಡಲು ಅವಕಾಶವಿರುತ್ತದೆ ಎಂದು ತಿಳಿಸಿದರು.

**(ಕ್ರಮ: ಮೀನುಗಾರಿಕೆ ಹಿರಿಯ ಸಹಾಯಕ ನಿರ್ದೇಶಕರು, ತುಮಕೂರು)**

**7) ಕೃಷಿ ಮಾರುಕಟ್ಟೆ:-**

ಉಪ ನಿರ್ದೇಶಕರು, ಕೃಷಿ ಮಾರಾಟ ಇಲಾಖೆ ರವರು ಪ್ರಗತಿ ವಿವರ ನೀಡಿದರಲ್ಲದೆ, ಸುಗ್ಗಿ ಈಗತಾನೆ ಪ್ರಾರಂಭವಾಗಿರುವುದರಿಂದ ದಾಸ್ತಾನು ಪ್ರಕ್ರಿಯೆಯನ್ನು ಇದೀಗತಾನೆ ಪ್ರಾರಂಭಿಸಬೇಕಾಗಿದೆ ಎಂದು ಸಭೆಗೆ ತಿಳಿಸಿದರು.

**(ಕ್ರಮ: ಉಪ ನಿರ್ದೇಶಕರು, ಕೃಷಿ ಮಾರಾಟ ಇಲಾಖೆ)**

**8) ಕಾರ್ಮಿಕ ಇಲಾಖೆ:-**

ಕಾರ್ಮಿಕ ಅಧಿಕಾರಿಗಳು ಸಭೆಗೆ ಪ್ರಗತಿ ವಿವರ ನೀಡಿ ಕಟ್ಟಡ ಕಾರ್ಮಿಕ ಫಲಾನುಭವಿಗಳಿಗೆ ನೀಡಬೇಕಾದ ಪ್ರಯೋಜನವನ್ನು ನೀಡಲು ಕ್ರಮ ವಹಿಸಲಾಗುತ್ತಿದೆ. ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯ ಮಾನ್ಯ ಅಧ್ಯಕ್ಷರು ಮಾತನಾಡಿ ಕಾರ್ಮಿಕರಿಗೆ ನೀಡುವ ಭವಿಷ್ಯ ನಿಧಿ, ಆರೋಗ್ಯ ವಿಮೆ ಮುಂತಾದ ಸರ್ಕಾರದಿಂದ ನೀಡುವ ಪ್ರಯೋಜನಗಳ ಬಗ್ಗೆ ಅಸಂಘಟಿತ ಕಟ್ಟಡ ಕಾರ್ಮಿಕರಿಗೆ ಅರಿವು ಮೂಡಿಸಲು ಜಿಲ್ಲಾ/ತಾಲ್ಲೂಕು ಮಟ್ಟದಲ್ಲಿ ಕಾರ್ಮಿಕ ಮೇಳವನ್ನು ಏರ್ಪಡಿಸಬೇಕೆಂದು ಸೂಚಿಸಿದರು.

ಶಿಕ್ಷಣ ಮತ್ತು ಆರೋಗ್ಯ ಸ್ಥಾಯಿ ಸಮಿತಿ ಅಧ್ಯಕ್ಷರು ಮಾತನಾಡಿ, ತುರುವೇಕೆರೆ ತಾಲ್ಲೂಕಿನಲ್ಲಿ ಕಾರ್ಮಿಕರ ನೊಂದಣಿಗೆ ವ್ಯಾಪಕ ಪ್ರಚಾರ ಮಾಡಲು ಅಗತ್ಯ ಕ್ರಮವಹಿಸುವಂತೆ ತಿಳಿಸಿದರು.

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಮಾತನಾಡಿ, ಕಾರ್ಮಿಕ ನಿರೀಕ್ಷಕರು ಯಾವ-ಯಾವ ತಾಲ್ಲೂಕಿಗೆ ಯಾವ-ಯಾವ ದಿನಾಂಕದಂದು ಭೇಟಿ ನೀಡಬೇಕು ಎಂಬ ಬಗ್ಗೆ ಒಂದು ವೇಳಾಪಟ್ಟಿಯನ್ನು ಸಿದ್ದಪಡಿಸಿಕೊಂಡು ತಾಲ್ಲೂಕು ಮಟ್ಟದ ಅಧಿಕಾರಿಗಳು ಮತ್ತು ಚುನಾಯಿತ ಪ್ರತಿನಿಧಿಗಳಿಗೆ ತಿಳಿಸಿ ನೊಂದಣಿ ಕಾರ್ಯವನ್ನು ಸಮರ್ಪಕವಾಗಿ ನಿರ್ವಹಿಸುವಂತೆ ತಿಳಿಸಿದರು; ಹಾಗೂ NREGA ಅಡಿ 50 ದಿನ ಪೂರ್ಣಗೊಳಿಸಿರುವವರನ್ನು ಸೇರಿಸಿಕೊಂಡು ಮುಂದಿನ ಸಭೆಯ ದಿನಾಂಕದೊಳಗಾಗಿ ಶೇ.50ರಷ್ಟು ನೊಂದಣಿ ಕಾರ್ಯವನ್ನು ಕಡ್ಡಾಯವಾಗಿ ನಿರ್ವಹಿಸುವಂತೆ ತಿಳಿಸಿದರು.

**(ಕ್ರಮ: ಕಾರ್ಮಿಕ ಅಧಿಕಾರಿಗಳು, ತುಮಕೂರು ಜಿಲ್ಲೆ)**

**9) ಭಾರಿ ಮತ್ತು ಮಧ್ಯಮ ನೀರಾವರಿ:-**

ಅಧಿಕಾರಿಗಳು, ಹೇಮಾವತಿ ನಾಲಾ ವಲಯ ರವರು ಪ್ರಗತಿ ವಿವರ ನೀಡಿ ನೀರಾವರಿ ಸೃಷ್ಟಿ ಕಾಮಗಾರಿಗಳು ಅಡಿ ಭೌತಿಕವಾಗಿ ಶೇಕಡ 68.13 ಆರ್ಥಿಕವಾಗಿ ಶೇಕಡ 89.97, ಜಮೀನು ನೀರಾವರಿ ಕಾಲುವೆಗಳ ನಿರ್ಮಾಣ ಕಾರ್ಯಕ್ರಮದಡಿ ಭೌತಿಕವಾಗಿ ಶೇಕಡ 66.87 ಆರ್ಥಿಕವಾಗಿ ಶೇಕಡ 162.66 ಸಾಧನೆಯಾಗಿದೆ ಹಾಗೂ ಹೇಮಾವತಿ ನಾಲಾ ವಲಯ ವ್ಯಾಪ್ತಿಯಲ್ಲಿನ ಕುಡಿಯುವ ನೀರಿನ ಏತ ನೀರಾವರಿ ಯೋಜನೆಯ ಪ್ರಗತಿ ವಿವರಗಳನ್ನು ಸಭೆಗೆ ತಿಳಿಸಿದರು. ಮುಂದುವರೆದು ವಿಶೇಷ ಘಟಕ ಯೋಜನೆ ಅಡಿ ಭೌತಿಕವಾಗಿ ಶೇಕಡ 95, ಆರ್ಥಿಕವಾಗಿ ಶೇಕಡ 109.72, ಗಿರಿಜನ ಉಪಯೋಜನೆ ಅಡಿ ಭೌತಿಕವಾಗಿ ಶೇಕಡ 87.80, ಆರ್ಥಿಕವಾಗಿ ಶೇಕಡ 111.22 ಪ್ರಗತಿಯಾಗಿದೆ, ಸಣ್ಣ ನೀರಾವರಿ ಕೆರೆಗಳ ಜೀರ್ಣೋದ್ಧಾರ ಕಾರ್ಯಕ್ರಮದಲ್ಲಿ ಭೌತಿಕವಾಗಿ ಶೇ.55.00 ಹಾಗೂ ಆರ್ಥಿಕವಾಗಿ ಶೇ.41.48 ಪ್ರಗತಿ ಸಾಧಿಸಲಾಗಿದೆ ಎಂದು ಸಭೆಗೆ ತಿಳಿಸಿದರು.

ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ ಮಾನ್ಯ ಅಧ್ಯಕ್ಷರು ಮಾತನಾಡಿ ವಿಶೇಷ ಘಟಕ ಯೋಜನೆ/ ಗಿರಿಜನ ಉಪಯೋಜನೆಗಳಡಿ ಆಯ್ಕೆಯಾದ ಫಲಾನುಭವಿಗಳ ಪಟ್ಟಿ ನೀಡುವಂತೆ ಸೂಚಿಸಿದರು.

**(ಕ್ರಮ: ಮುಖ್ಯ ಇಂಜಿನಿಯರ್, ಹೇಮಾವತಿ ನಾವಲಯ, ತುಮಕೂರು)**

**11. ಸಣ್ಣ ನೀರಾವರಿ:-**

ಕಾರ್ಯಪಾಲಕ ಇಂಜಿನಿಯರ್ ,ಸಣ್ಣ ನೀರಾವರಿ ವಿಭಾಗ, ತುಮಕೂರು ಇವರು ಮಾತನಾಡಿ, ಸಣ್ಣ ನೀರಾವರಿ ಇಲಾಖಾವತಿಯಿಂದ (ಮೇಲ್ಮೈ ನೀರು) ಸೃಷ್ಟಿಸಿದ ನೀರಾವರಿ ಸಾಮರ್ಥ್ಯ, ಪರೋಕ್ಷ ನೀರಾವರಿ ಹಾಗೂ ಅಚ್ಚುಕಟ್ಟು ಸ್ಥಿರೀಕರಣದ ವಿವರ ಕಾರ್ಯಕ್ರಮಗಳ ಪ್ರಗತಿ ಬಗ್ಗೆ ವಿವರ ನೀಡಿದರು.

**12. ಕುಡಿಯುವ ನೀರು:**

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು ಮಾತನಾಡಿ, ಘನ ಸರ್ಕಾರವು 149 ಡೀ-ಪ್ಲೋರೈಡೆಷನ್ ಘಟಕಗಳನ್ನು ಮಂಜೂರು ಮಾಡಿದ್ದು, ಅವುಗಳನ್ನು ಅಳವಡಿಸುವ ಸಂಬಂಧ KRIDLಗೆ ರೂ.4.00ಲಕ್ಷ ಹಣ ನೀಡಿರುತ್ತದೆ; ಈ ಪೈಕಿ 131ಕಡೆಗಳಲ್ಲಿ ಕೆಲಸ ಪ್ರಾರಂಭವಾಗಿದ್ದು ಕೆಲವು ಕಡೆ ಜಾಗದ ಸಮಸ್ಯೆಯಿರುತ್ತದೆ; ಈ ಬಗ್ಗೆ ಸಂಬಂಧಪಟ್ಟ ತಾಲ್ಲೂಕಿನ ಕಾರ್ಯನಿರ್ವಾಹಕ ಅಧಿಕಾರಿ, ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಮತ್ತು ಸಂಬಂಧಪಟ್ಟ ವಿಭಾಗದ ಕಾರ್ಯಪಾಲಕ ಇಂಜಿನಿಯರ್ ಸೇರಿ ಸಮಾಲೋಚಿಸಿ ಸಮಸ್ಯೆ ಬಗೆಹರಿಸಿಕೊಡಬೇಕೆಂದು ತಿಳಿಸಲಾಗಿದೆ ಎಂದು ಸಭೆಗೆ ತಿಳಿಸಿದರು; ಮುಂದುವರೆದು ಮಾತನಾಡುತ್ತಾ, ಕುಡಿಯುವ ನೀರು ಸರಬರಾಜು ಯೋಜನೆಗೆ ರೂ.57.83 ಕೋಟಿ ಅನುದಾನ ಬಿಡುಗಡೆಯಾಗಿದ್ದು ಈವರೆಗೆ ರೂ.55.38ಕೋಟಿ ಖರ್ಚಾಗಿರುತ್ತದೆ; Sustainability ಕಾಮಗಾರಿಗಳಿಗೆ ರೂ.13.00ಕೋಟಿ ಖರ್ಚಾಗಿರುತ್ತದೆ; ಈ ಕುರಿತು ರೂ.10.00ಕೋಟಿ ಹೆಚ್ಚುವರಿ ಅನುದಾನ ಕೋರಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದ್ದು, ಸಧ್ಯದಲ್ಲಿಯೇ ಅನುದಾನ ಬಿಡುಗಡೆಯಾಗುವ ನೀರಿಕ್ಷೆ ಇದೆ; ಹಾಗೂ 5 ರಿಂದ 10 ಕೋಟಿ ರೂಪಾಯಿಗಳ ಬಿಲ್ ಗಳು ಪಾವತಿಗೆ ಬಾಕಿಯಿರುತ್ತವೆ; ಮೊದಲೂರು ಕೆರೆ ಉಸ್ತುವಾರಿಯನ್ನು ಈ ಹಿಂದೆ ಪಂ.ರಾ.ಇಂ. ವಿಭಾಗ, ತುಮಕೂರು ಇವರಿಗೆ ವಹಿಸಲಾಗಿದ್ದು, ಕಾಮಗಾರಿ ಉಸ್ತುವಾರಿ ಕಷ್ಟಸಾಧ್ಯವೆಂದು ಅವರು ತಿಳಿಸಿದ ಮೇರೆಗೆ ಸದರಿ ಕಾಮಗಾರಿಯ

ಉಸ್ತುವಾರಿಯನ್ನು ಪಂ.ರಾ.ಇಂ.ವಿಭಾಗ, ಮಧುಗಿರಿಗೆ ವಹಿಸಲಾಗಿದ್ದು, ಪ್ರಸ್ತುತ ಅವರು ಉಸ್ತುವಾರಿ ಮಾಡುತ್ತಿದ್ದಾರೆ ಎಂದು ಸಭೆಗೆ ತಿಳಿಸಿದರು.

ಕಾರ್ಯಪಾಲಕ ಇಂಜಿನಿಯರ್, ಪಂ.ರಾ.ಇಂ. ತುಮಕೂರು/ಮಧುಗಿರಿ ರವರು ಮಾತನಾಡಿ, ತಮ್ಮ-ತಮ್ಮ ವಿಭಾಗ ವ್ಯಾಪ್ತಿಗೆ ಸಂಬಂಧಿಸಿದಂತೆ ಕಾಮಗಾರಿಗಳ ಕುರಿತು ಯೋಜನೆವಾರು ಪ್ರಗತಿಯನ್ನು ಸಭೆಗೆ ವಿವರಿಸಿದರು.

ಕಾರ್ಯಪಾಲಕ ಇಂಜಿನಿಯರ್, ಪಂ.ರಾ.ಇಂ. ತುಮಕೂರು ಇವರು ಮಾತನಾಡಿ, MWS ಅಡಿ ಪ್ರಗತಿ ಸ್ವಲ್ಪ ಮಟ್ಟಿಗೆ ಕುಂಠಿತವಾಗಿದ್ದು ಈ ತಿಂಗಳಲ್ಲಿ ಪ್ರಗತಿ ಸಾಧಿಸಲಾಗುವುದು; ಅನುದಾನ ಕೊರತೆಯಿಂದಾಗಿ Sustanability ಅಡಿ (ಮೈದಾಳ-ಕಟ್ಟಿಗೆಹಳ್ಳಿ) ಮೂರು ಕಾಮಗಾರಿಗಳು ಬಾಕಿ ಉಳಿದಿವೆ; ಅದರಂತೆ ತುರುವೇಕೆರೆ ತಾಲ್ಲೂಕಿನಲ್ಲಿ ದಬ್ಬೇಘಟ್ಟ-ಕಣತ್ತೂರು ಗ್ರಾಮಗಳ ಎರಡು ಕಾಮಗಾರಿಗಳು ಬಾಕಿ ಇರುತ್ತವೆ; 13ನೇ ಹಣಕಾಸು ಯೋಜನೆ ಅಡಿಯಲ್ಲಿ ಕೊಪ್ಪ ಮತ್ತು ಕಡಬ ಗ್ರಾಮಗಳಿಗೆ ಸಂಬಂಧಿಸಿದಂತೆ ಹೊಸದಾಗಿ ಪ್ರಸ್ತಾವನೆ ಸಲ್ಲಿಸಲು ತಿಳಿಸಿದ್ದಾರೆ; 6 ಕಾಮಗಾರಿಗಳಿಗೆ 10-15 ದಿನಗಳಲ್ಲಿ ಟೆಂಡರ್ ಪ್ರಕ್ರಿಯೆಗೆ ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ಸಭೆಗೆ ತಿಳಿಸಿದರು.

ಕಾರ್ಯಪಾಲಕ ಇಂಜಿನಿಯರ್, ಪಂ.ರಾ.ಇಂ. ಮಧುಗಿರಿ ರವರು ಮಾತನಾಡಿ, ತಮ್ಮ ವಿಭಾಗ ವ್ಯಾಪ್ತಿಗೆ 122 ಕಾಮಗಾರಿಗಳು ಮಂಜೂರು ಆಗಿದ್ದು, ಈ ವರ್ಷ 66 ಕಾಮಗಾರಿಗಳು ಪೂರ್ಣಗೊಂಡು 15 ಕಾಮಗಾರಿಗಳು ವಿವಿಧ ಹಂತದಲ್ಲಿದ್ದು ಇವುಗಳನ್ನು 15 ದಿನಗಳೊಳಗಾಗಿ ಪೂರ್ಣಗೊಳಿಸಲಾಗುವುದು; ಪ್ರಸಕ್ತ ಸಾಲಿನ ಕಾಮಗಾರಿಗಳಿಗೆ ಟೆಂಡರ್ ಕರೆಯಲಾಗಿದೆ ಎಂದು ಸಭೆಗೆ ತಿಳಿಸಿದರು. ಮುಂದುವರೆದು ಮಾತನಾಡಿ, ಬಹುಗ್ರಾಮ ಯೋಜನೆಯಡಿ 7 ಕಾಮಗಾರಿಗಳನ್ನು ಕೈಗೆತ್ತಿಕೊಂಡಿದ್ದು, ಈ ಪೈಕಿ ಬುಕ್ಕಾಪಟ್ಟಣ ಕಾಮಗಾರಿ ಸ್ಥಗಿತ (defer) ಗೊಂಡಿರುತ್ತದೆ; ಉಳಿದಂತೆ ಚಿ.ನಾ.ಹಳ್ಳಿ-2, ಕೆಂಕೆರೆ, ತಿಮ್ಮನಹಳ್ಳಿ, ಗಂಟೆನಹಳ್ಳಿ ಗ್ರಾಮಗಳ ಕಾಮಗಾರಿಗಳ ಸಂಬಂಧ ಪ್ರಸ್ತಾವನೆಯು ಸರ್ಕಾರದ ಮಟ್ಟದಲ್ಲಿದೆ.

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು ಮಾತನಾಡಿ, ಈ ಬಗ್ಗೆ ಎರಡು ವಿಭಾಗಗಳ EE ರವರು ಗಮನಹರಿಸಿ ಬಿಡುಗಡೆಯಾದ ಅನುದಾನವನ್ನು ಸದ್ಬಳಕೆ ಮಾಡಿದಲ್ಲಿ ಅನುಕೂಲವಾಗುತ್ತದೆ; 4 ದಿನಗಳೊಳಗಾಗಿ ಕೆಲಸವಾಗದಿದಲ್ಲಿ ಅನುದಾನ ವ್ಯಪಗತವಾಗುವುದರಿಂದ ಟೆಂಡರ್ ಪ್ರಕ್ರಿಯೆಗೆ ಕ್ರಮವಹಿಸಬೇಕು; ಇಲ್ಲವಾದಲ್ಲಿ ಸಂಬಂಧಪಟ್ಟ ಅಧಿಕಾರಿಗಳು ನೇರ ಹೊಣೆಗಾರರಾಗುತ್ತಾರೆ ಎಂದು ತಿಳಿಸಿ, ಕುಡಿಯುವ ನೀರು ಯೋಜನೆಯಡಿ ಬಾಕಿ ಇರುವ (ಶಾಲೆ&ಅಂಗನವಾಡಿ ಸೇರಿ) ಒಟ್ಟು 1148 ಕಾಮಗಾರಿಗಳ ಅನುಷ್ಠಾನದಲ್ಲಿ ತ್ವರಿತ ಕ್ರಮಕೈಗೊಂಡು ದಿನಾಂಕ:25-12-2013ರೊಳಗೆ ಪ್ರಗತಿ ಸಾಧಿಸಿ ಮುಂದಿನ ಮೂರು ತಿಂಗಳಿಗೆ Contingency Action Plan ಮಾಡಲು ತಿಳಿಸಿದರು.

**13. ರಸ್ತೆ ನಿರ್ವಹಣೆ:**

ಕಾರ್ಯಾಪಾಲಕ ಇಂಜಿನಿಯರ್, PMGSY ರವರು ಮಾತನಾಡಿ, ಜಿಲ್ಲೆಗೆ ಸಂಬಂಧಿಸಿದಂತೆ ಕಾಮಗಾರಿಗಳ ಗುರಿ, entrustment, expenditure, work approval ಇತ್ಯಾದಿ ಅಂಶಗಳ ಕುರಿತು ಸಭೆಗೆ ತಾಲ್ಲೂಕುವಾರು ಮಾಹಿತಿ ಒದಗಿಸಿದರು. ಪ್ರತಿಯಾಗಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು ಮಾತನಾಡಿ, ಲೆಕ್ಕಶೀರ್ಷಿಕೆ 3054 & 5054ರಡಿ ಅನುದಾನ ವ್ಯಪಗತವಾಗುವ ಸಾಧ್ಯತೆ ಇರುವುದರಿಂದ ಸದರಿ ಲೆಕ್ಕ ಶೀರ್ಷಿಕೆಗಳಡಿ ತುಂಡು ಗುತ್ತಿಗೆ ಆಧಾರದಲ್ಲಿ ನಿರ್ವಹಿಸಲಾಗುತ್ತಿರುವ ಕಾಮಗಾರಿಗಳ ಕುರಿತು ಉತ್ತಮ ಪ್ರಗತಿ ಸಾಧಿಸಬೇಕು; ಸರ್ಕಾರ ಹೊಸದಾಗಿ

ರೂ.7.18ಕೋಟಿ ಮೊತ್ತದ ಕ್ರಿಯಾ ಯೋಜನೆಯಲ್ಲಿ ರಸ್ತೆ ನಿರ್ವಹಣೆಗೆ ಹೆಚ್ಚುವರಿ ಅನುದಾನ ಮಂಜೂರಾತಿ ನೀಡಿದೆ; ಮಾನ್ಯ ವಿಧಾನಸಭಾ ಸದಸ್ಯರು/ ವಿಧಾನ ಪರಿಷತ್ ಸದಸ್ಯರು/ಜಿ.ಪಂ.ಸದಸ್ಯರುಗಳು/ತಾ.ಪಂ. ಸದಸ್ಯರುಗಳು/ಕಾರ್ಯನಿರ್ವಾಹಕ ಅಧಿಕಾರಿಗಳು/AEE/ PDO/ PMGSY AEE ಇವರುಗಳು ಕ್ರಿಯಾ ಯೋಜನೆ ಸಮಿತಿಯ ಸದಸ್ಯರುಗಳಾಗಿರುತ್ತಾರೆ; ತ್ವರಿತವಾಗಿ ಕ್ರಿಯಾ ಯೋಜನೆ ಸಿದ್ದಪಡಿಸಿ ಸಲ್ಲಿಸಿದಲ್ಲಿ ಸರ್ಕಾರದಿಂದ ಹಣ ಸೆಳೆಯಲು ಅನುಕೂಲವಾಗುತ್ತದೆ ಎಂದು ತಿಳಿಸಿದರು. ಮುಂದುವರೆದು ಮಾತನಾಡುತ್ತಾ, entrustment ಆಗಿರುವ ಕಾಮಗಾರಿಗಳ ಸಂಬಂಧ ಪ್ರಸಕ್ತ ಮಾಸಾಂತ್ಯದೊಳಗೆ ಶೇ.50ರಷ್ಟು ಆರ್ಥಿಕ ಪ್ರಗತಿಯಾಗಲೇ ಬೇಕು; ಇಲ್ಲವಾದಲ್ಲಿ ಅನುದಾನ ವ್ಯಪಗತವಾಗುತ್ತದೆ ಎಂದು ಸಭೆಗೆ ತಿಳಿಸಿದರು.

ಕಾರ್ಯಪಾಲಕ ಇಂಜಿನಿಯರ್, ಪಿ.ಎಂ.ಜಿ.ಎಸ್.ವೈ. ಇವರು ಮಾತನಾಡಿ ಈ ಯೋಜನೆಯ ಎರಡನೇ ಹಂತದಡಿ 125 ಕಿ.ಮೀ.ಗಳ ರಸ್ತೆ ನಿರ್ಮಾಣಕ್ಕಾಗಿ 16 ಅಂದಾಜು ಪಟ್ಟಿಗಳನ್ನು ಅನುಮೋದನೆಗಾಗಿ ಕೇಂದ್ರಸರ್ಕಾರಕ್ಕೆ ಕಳುಹಿಸಲಾಗಿದೆ, ಪ್ರಸಕ್ತ ಮಾಸಾಂತ್ಯದೊಳಗಾಗಿ ಟೆಂಡರ್ ಪ್ರಕ್ರಿಯೆ ಪ್ರಾರಂಭಿಸಲಾಗುವುದು ಎಂದು ತಿಳಿಸಿದರು.

**(ಕ್ರಮ: ಕಾರ್ಯಾಪಾಲಕ ಇಂಜಿನಿಯರ್, PMGSY, ತುಮಕೂರು)**

14 MGNREGA

ಉಪ ಕಾರ್ಯದರ್ಶಿ(ಅಭಿವೃದ್ಧಿ)ಯವರು ಮಾತನಾಡಿ, 2012-13ನೇ ಸಾಲಿನ ಬಾಕಿ ಅನುದಾನ ರೂ.36.63 ಕೋಟಿ ಮೊತ್ತವನ್ನು ಬಿಡುಗಡೆಗೊಳಿಸಲಾಗಿದೆ; ಈ ವರೆವಿಗೆ 25,65,648 ಮಾನವ ದಿನಗಳನ್ನು ಸೃಷ್ಠಿಸಿ ಯೋಜನೆಯ ಪ್ರಗತಿಯಲ್ಲಿ ಜಿಲ್ಲೆಯು ರಾಜ್ಯದಲ್ಲಿಯೇ ಪ್ರಥಮ ಸ್ಥಾನದಲ್ಲಿದೆ; ಈ ಯೋಜನೆಯ ಬಗ್ಗೆ ಗ್ರಾ.ಪಂ.ಮಟ್ಟದ ಅಧಿಕಾರಿಗಳು ಮತ್ತು ಚುನಾಯಿತ ಪ್ರತಿನಿಧಿಗಳಿಗೆ ಅರಿವು ಮೂಡಿಸುವ ಕಾರ್ಯಕ್ರಮವನ್ನು ಕಳೆದ ವಾರ ಮಾಡಲಾಗಿದೆ; Regular ರೂ.138.00ಕೋಟಿ ಮೊತ್ತದ Regular Action Plan ಅನುಮೋದನೆಯಾಗಿದ್ದು, ಕಾಮಗಾರಿ ಅನುಷ್ಠಾನಗೊಳಿಸಲಾಗುತ್ತಿದೆ; ಅದೇ ರೀತಿ ವಯಕ್ತಿಕ ಫಲಾನುಭವಿಗಳಿಗೆ ರು.385.00ಕೋಟಿ ಮೊತ್ತಕ್ಕೆ ಹೆಚ್ಚುವರಿ ಕ್ರಿಯಾ ಯೋಜನೆ ತಯಾರಿಸಲಾಗಿದೆ; ಹಾಗೂ ನಮ್ಮ ಹೊಲ – ನಮ್ಮ ದಾರಿಗೆ ರೂ.58.00ಕೋಟಿ, ಒಕ್ಕಲುಕಣಕ್ಕೆ ರೂ.25.00ಕೋಟಿ, ಮುಸಾಫೀರ್ ಮಾದರಿ ಕಟ್ಟಡಕ್ಕೆ ರೂ.10.00ಕೋಟಿ, ಕೆರೆಗಳ ಪುನ:ಶ್ಚೇತನಕ್ಕ ರೂ.32.50ಕೋಟಿ, ಸಣ್ಣ ರೈತರಿಗೆ ಹೊಲಕ್ಕೆ ದಾರಿ ರೂ.130.00ಕೋಟಿ, ಆಟದ ಮೈದಾನಕ್ಕೆ ರೂ.22.00ಕೋಟಿ, 89 ಸ್ಮಶಾನಗಳ ಅಭಿವೃದ್ಧಿಗೆ ರೂ.1.79ಕೋಟಿ, ದನ-ಕುರಿ ದೊಡ್ಡಿ ನಿರ್ಮಾಣಕ್ಕಾಗಿ 18,774 ಫಲಾನುಭವಿಗಳಿಗೆ ರೂ.60.00ಕೋಟಿ, ರಾಜೀವ್ ಗಾಂಧಿ ಸೇವಾ ಕೇಂದ್ರಕ್ಕೆ ರೂ.410 ಲಕ್ಷ , ನಮ್ಮ ಹಳ್ಳಿ-ನಮ್ಮ ನೀರು ಯೋಜನೆಯ 1469 ಕಾಮಗಾರಿಗಳಿಗೆ ರೂ.14.46ಕೋಟಿಗೆ ಕ್ರಿಯಾಯೋಜನೆಗಳನ್ನು ತಯಾರಿಸಲಾಗಿದೆ; ಅಲ್ಲದೆ ಮನೆಗೊಂದು ಶೌಚಾಲಯ ಕಾರ್ಯಕ್ರಮದಡಿ 64400 ಶೌಚಾಲಯಗಳಿಗೆ 24,500 ಶೌಚಾಲಯಗಳನ್ನು ನಿರ್ಮಿಸಿ ಹಣ ಪಾವತಿಸಲಾಗಿದೆ; ಈಗ ಅನುದಾನ ಪೂರ್ಣ ಬಳಕೆಯಾಗಿದ್ದು ಪಾವತಿಗಾಗಿ ಫಲಾನುಭವಿಗಳಿಂದ ಒತ್ತಡ ಜಾಸ್ತಿಯಾಗಿದೆ; ಕೇಂದ್ರದ ಅನುದಾನ ಶೇ.91ರಷ್ಟು ಸದ್ಬಳಕೆಯಾಗಿರುತ್ತದೆ; ಸರ್ಕಾರ ಈಗ RTGS ಜಾರಿಗೆ ತಂದಿದ್ದು, ಅದರಂತೆ ಅನುದಾನವನ್ನು ಗ್ರಾ.ಪಂ.ಗಳಿಗೆ ನೀಡಲಾಗಿದೆ; ಪಂಚಾಯತಿಯವರು ಫಲಾನುಭವಿಗಳಿಗೆ ತಲುಪಿಸಲು ವೇಳಾಪಟ್ಟಿ ನೀಡಲಾಗಿದ್ದು, ಅದರಂತೆ ಒಂದು ವಾರದಲ್ಲಿ ಪೂರ್ಣ ಪ್ರಮಾಣದಲ್ಲಿ ಹಣ ಪಾವತಿಸಲಾಗುವುದು; ಈ ಯೋಜನೆ ಅಡಿ ಹಲವಾರು ದೂರುಗಳು ಬಂದಿದ್ದು, ಸದರಿ ದೂರುಗಳ

ಕುರಿತು ಆಗಿಂದಾಗ್ಗ ಕ್ರಮವಹಿಸಲಾಗಿದೆ; ವಾರಕೊಮ್ಮೆ regular ಆಗಿ ಪ್ರಗತಿ ಪರಿಶಿಲನೆ ಮಾಡಲಾಗುತ್ತಿದೆ ಎಂದು ಸಭೆಗೆ ತಿಳಿಸಿದರು. ಪೂರಕವಾಗಿ ಎಲ್ಲಾ ತಾ.ಪಂ.ನ ಕಾರ್ಯನಿರ್ವಾಹಕ ಅಧಿಕಾರಿಗಳು ತಮ್ಮ-ತಮ್ಮ ತಾಲ್ಲೂಕುಗಳ ವ್ಯಾಪ್ತಿಯ ಯೋಜನೆಯ ಪ್ರಗತಿ ಕುರಿತು ಅಂಕಿ-ಅಂಶಗಳ ಮಾಹಿತಿಯನ್ನು ಸಭಗೆ ವಿವರಿಸಿದರು.

**15. ಶಿಕ್ಷಣ:-**

ಉಪ ನಿರ್ದೇಶಕರು, ಸಾ.ಶಿ.ಇ. ತುಮಕೂರು ಇವರು ಮಾತನಾಡಿ ತಮ್ಮ ವಿಭಾಗಕ್ಕೆ ಸಂಬಂಧಿಸಿದಂತೆ ಅನ್ನಭಾಗ್ಯ ಮತ್ತು ಕ್ಷೀರಭಾಗ್ಯ ಯೋಜನೆಗಳು ಯಶಸ್ವಿಯಾಗಿ ನಡೆಯುತ್ತಿದ್ದು ಯಾವುದೇ ರೀತಿಯ ಸಮಸ್ಯೆ ಇರುವುದಿಲ್ಲ ಎಂದು ತಿಳಿಸಿ, SSA & RMSA ಕಾರ್ಯಕ್ರಮಗಳ ಪ್ರಗತಿ ವಿವರ ನೀಡಿದರು. ಮುಂದುವರೆದು ಮಾತನಾಡುತ್ತಾ, ಜಿಲ್ಲೆಯಲ್ಲಿ ಕುಣಿಗಲ್ ತಾಲ್ಲೂಕು ಹೊರತುಪಡಿಸಿ ಉಳಿದ ತಾಲ್ಲೂಕುಗಳಲ್ಲಿ RMSA ಕಾರ್ಯಕ್ರಮದಡಿ ಕಾಮಗಾರಿಗಳನ್ನು ಪ್ರಾರಂಭಿಸಲಾಗಿದೆ ಎಂದು ಸಭೆಗೆ ತಿಳಿಸಿದರು. ಪ್ರತಿಯಾಗಿ ಸಾಮಾಜಿ ನ್ಯಾಯ ಸ್ಥಾಯಿ ಸಮಿತಿ ಅಧ್ಯಕ್ಷರು ಮಾತನಾಡಿ, ಕುಣಿಗಲ್ ತಾಲ್ಲೂಕಿನಲ್ಲಿ ಭೂಮಿ ಪೂಜೆಗಾಗಿ ದಿನಾಂಕವನ್ನು ಮುಂದೂಡಲಾಗಿದ್ದು, ಈ ವಾರದೊಳಗಾಗಿ ದಿನಾಂಕ ನಿಗಧಿಪಡಿಸಿ ಕಾರ್ಯಕ್ರಮ ಉದ್ಘಾಟಿಸಲಾಗುವುದು ಎಂದು ತಿಳಿಸಿದರು.

ಶಿಕ್ಷಣ & ಆರೋಗ್ಯ ಸ್ಥಾಯಿ ಸಮಿತಿ ಅಧ್ಯಕ್ಷರು ಮಾತನಾಡಿ, ಭೂಪಾಲ್ ಸಮಾವೇಶದ ಹಿನ್ನಲೆಯಲ್ಲಿ ವಿದ್ಯಾರ್ಥಿಗಳು ಸೋಲಾರ್ ಬೈಸಿಕಲ್ ಕಂಡುಹಿಡಿದಿದ್ದು, ಸದರಿ ಬೈಸಿಕಲ್ ತಯಾರಿಕೆಗೆ ಸುಮಾರು ರೂ. 15,000/- ಖರ್ಚು ಬರುತ್ತಿದ್ದು, ನಮ್ಮ ಜಿಲ್ಲೆಯಲ್ಲಿಯೂ ಸಹ ವಿದ್ಯಾರ್ಥಿಗಳಿಗೆ ಈ ಸೌಲಭ್ಯ ಒದಗಿಸಿದರೆ ಅವರ ಶೈಕ್ಷಣಿಕ ಮಟ್ಟ ಪ್ರಗತಿ ಹೊಂದುತ್ತದೆ ಎಂದು ಅಭಿಪ್ರಾಯಿಸಿದಾಗ, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು ಮಾತನಾಡಿ, ಈ ಕುರಿತು ಪರಿಶೀಲಿಸಿ ಪ್ರಸ್ತಾವನೆ ಸಲ್ಲಿಸಿದಲ್ಲಿ ಲೆಕ್ಕ ಶೀರ್ಷಿಕೆ 2515ರಡಿ ವೆಚ್ಚ ಭರಿಸಲಾಗುವುದು ಎಂದು ತಿಳಿಸಿದರು. ಮುಂದುವರೆದು ಮಾತನಾಡುತ್ತಾ, ಕೊಠಡಿಗಳ ಕೊರತೆಯಿರುವ ಪ್ರೌಢಶಾಲೆಗಳ ಕುರಿತು ಪರಿಶೀಲಿಸಿ (RMSA + DDPI ) ಪಟ್ಟಿಮಾಡಿ ಮೂರು ದಿನಗಳೊಳಗೆ ಜಿ.ಪಂ.ಗೆ ಸಲ್ಲಿಸಿದಲ್ಲಿ ಸದರಿ ಪಟ್ಟಿಯನ್ನು ಶಿಕ್ಷಣ ಆಯುಕ್ತರಿಗೆ ಸಲ್ಲಿಸಲು ಕ್ರಮವಹಿಸಲಾಗುವುದು ಎಂದು ಸಭೆಗೆ ತಿಳಿಸಿದರು.

ಮಾನ್ಯ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ ಅಧ್ಯಕ್ಷರು ಮಾತನಾಡಿ ಜಿಲ್ಲೆಯಲ್ಲಿನ ಶಿಕ್ಷಕರ ಖಾಲಿ ಹುದ್ದೆಗಳ ಮಾಹಿತಿ ನೀಡುವಂತೆ ಕೋರಿದರು. ಅದರಂತೆ, ಉಪ ನಿರ್ದೇಶಕರು, ಸಾ.ಶಿ.ಇ., ತುಮಕೂರು ಇವರು ಮಾತನಾಡಿ, ತುಮಕೂರು ಶೈಕ್ಷಣಿಕ ವಿಭಾಗದಲ್ಲಿ 136 ಶಿಕ್ಷಕರ ಹುದ್ದೆಗಳು ಖಾಲಿ ಇದ್ದು, ಪರ್ಯಾಯವಾಗಿ ಅತಿಥಿ ಶಿಕ್ಷಕರನ್ನು ನೇಮಕ ಮಾಡಿಕೊಳ್ಳಲಾಗಿದೆ ಎಂದು ತಿಳಿಸಿದರು. ಉಪ ನಿರ್ದೇಶಕರು, ಮಧುಗಿರಿ ಶೈಕ್ಷಣಿಕ ಜಿಲ್ಲೆ ರವರು ಮಾತನಾಡಿ ಶಾಲಾ ಮಕ್ಕಳಿಗೆ ಕಲ್ಪಿಸಿರುವ ಕ್ಷೀರಭಾಗ್ಯ ಯೋಜನೆ ಮತ್ತು ವಿಟಮಿನ್ ಮಾತ್ರೆಗಳನ್ನು ನೀಡುವ ಬಗ್ಗೆ ಸಭೆಗೆ ಮಾಹಿತಿ ನೀಡಿದರು. ಮುಂದುವರೆದು ಮಾತನಾಡಿ ಮಧುಗಿರಿ ಶೈಕ್ಷಣಿಕ ಜಿಲ್ಲೆಯಲ್ಲಿ 291 ಶಿಕ್ಷಕರ ಕೊರತೆ ಇದ್ದುದರಿಂದ 242 ಅತಿಥಿ ಶಿಕ್ಷಕರನ್ನು ಆಯ್ಕೆ ಮಾಡಿದ್ದು, ಪ್ರಸ್ತುತ 124 ಮಂದಿ ಶಿಕ್ಷಕರು ಕರ್ತವ್ಯ ನಿರ್ವಹಿಸುತ್ತಿದ್ದಾರೆ; ಇನ್ನೂ 47 ಅಭ್ಯರ್ಥಿಗಳಿಗೆ ಹೊಸದಾಗಿ ಸ್ಥಳನಿಯುಕ್ತಿಗೊಳಿಸಲಾಗಿದೆ (postings)ಎಂದು ಸಭೆಗೆ ತಿಳಿಸಿದರು.

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು ಮಾತನಾಡಿ, ಸೇರ್ಪಡೆ ಮತ್ತು ಮಾರ್ಪಾಡು ಲೆಕ್ಕ ಶೀರ್ಷಿಕೆಯಡಿ ಶಾಲಾ ಕಟ್ಟಡ ದುರಸ್ತಿಗೊಳಿಸಿರುವ ಕುರಿತು ವಿಭಾಗವ್ಯಾಪ್ತಿವಾರು ಕಾರ್ಯ ಪಾಲಕ

ಇಂಜಿನಿಯರ್, ಪಂ.ರಾ.ಇಂ., ವಿಭಾಗ, ತುಮಕೂರು/ಮಧುಗಿರಿ ಇವರುಗಳಿಂದ ಮಾಹಿತಿ ಪಡೆದುಕೊಂಡರು. ನಂತರ ಮಾತನಾಡಿ, ಅಂಗನವಾಡಿ / ಸಮಾಜ ಕಲ್ಯಾಣ ಇಲಾಖೆಯ ವಿದ್ಯಾರ್ಥಿನಿಲಯ / ಆರೋಗ್ಯ ಇಲಾಖೆ / ಶಿಕ್ಷಣ ಇಲಾಖೆಗಳ ಕಟ್ಟಡಗಳ ದುರಸ್ತಿ ಕುರಿತು ಸಂಬಂಧಪಟ್ಟ ಇಲಾಖೆಗಳ ಜಿಲ್ಲಾಮಟ್ಟದ ಅಧಿಕಾರಿಗಳು ಪರಸ್ಪರ ಸಮಾಲೋಚಿಸಿ ನಿಮ್ಮ ಹಂತದಲ್ಲಿಯೇ ತೀರ್ಮಾನ ಕೈಗೊಂಡು, ಸಂಬಂಧಪಟ್ಟ ಪಂ.ರಾ.ಇಂ.ವಿಭಾಗದ ಕಾರ್ಯಪಾಲಕ ಇಂಜಿನಿಯರ್ ರವರೊಂದಿಗೆ ಸಮಾಲೋಚಿಸಿ ಪಟ್ಟಿ ಸಲ್ಲಿಸಿದಲ್ಲಿ ಸದರಿ ಪಟ್ಟಿಗೆ ಆಡಳಿತಾತ್ಮಕ ಅನುಮೋದನೆ ನೀಡಲಾಗುವುದು; ಆದುದರಿಂದ, ಕ್ರಿಯಾ ಯೋಜನೆಯಲ್ಲಿ ಸೇರಿರುವ ಕಾಮಗಾರಿಗಳ ಆಡಳಿತಾತ್ಮಕ ಅನುಮೋದನೆಗೆ ತುರ್ತಾಗಿ ಕ್ರಮವಹಿಸಬೇಕು; ಜಿಲ್ಲಾ ಪಂಚಾಯಿತಿ ವತಿಯಿಂದಲೇ ಆಡಳಿತಾತ್ಮಕ ಅನುಮೋದನೆ ನೀಡಿದ ಮೇಲೆ ಪುನ: ಕಾರ್ಯಪಾಲಕ ಇಂಜಿನಿಯರ್ ಗಳು ಆಡಳಿತಾತ್ಮಕ ಅನುಮೋದನೆ ನೀಡುವ ಪ್ರಶ್ನೆಯೇ ಉದ್ಭವಿಸುವುದಿಲ್ಲ ಎಂದು ಸಭೆಗೆ ತಿಳಿಸಿದರು.

ಶ್ರೀ ವೈ.ಹೆಚ್.ಹುಚ್ಚಯ್ಯರವರು ಮಾತನಾಡಿ ಕೆಸ್ತೂರು ಬಾಲಿಕ ಪಾಠಶಾಲೆಗಳ ಕುರಿತು ಮಾಹಿತಿ ಪಡೆದರು.

**(ಕ್ರಮ: ಉಪ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ತುಮಕೂರು/ಮಧುಗಿರಿ ಶೈಕ್ಷಣಿಕ ಜಿಲ್ಲೆ)**

**16) ಕನ್ನಡ ಮತ್ತು ಸಂಸ್ಕೃತಿ ಇಲಾಖೆ:**

ಸಹಾಯಕ ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇವರು ಮಾತನಾಡಿ, ಬಯಲು ರಂಗಮಂದಿರ ನಿರ್ಮಾಣಕ್ಕಾಗಿ 2013-14ನೇ ಸಾಲಿಗೆ ಬಿಡುಗಡೆ ಆಗಿರುವ ರೂ. 3.00 ಲಕ್ಷಗಳನ್ನು ಸಂಘಸಂಸ್ಥೆಗಳಿಗೆ ಬಿಡುಗಡೆಗೊಳಿಸಲು ಕ್ರಮವಹಿಸಲಾಗುತ್ತಿದೆ. ಕಳೆದ ಸಾಲಿಗೆ ಮಂಜೂರಾಗಿದ್ದ ಬಯಲು ರಂಗಮಂದಿರಗಳಿಗೆ 2ನೇ ಕಂತಿನ ಅನುದಾನ ರೂ. 2.00 ಲಕ್ಷಗಳನ್ನು ಮೀಸಲಿಟ್ಟಿದ್ದು, ಈ ಸಂಬಂಧ ಯಾರು ಪ್ರಗತಿ ವಿವರಗಳನ್ನು ಸರಿಯಾಗಿ ಸಲ್ಲಿಸುತ್ತಿಲ್ಲ, ಆದುದರಿಂದ ಸದರಿ ಅನುದಾನವನ್ನು ಉಳಿಸಿಕೊಳ್ಳುವ ಬದಲು ಜಿಲ್ಲಾ ಪಂಚಾಯತ್ ಗಮನಕ್ಕೆ ತಂದು ಬೇರೆಡೆಯ ಕಾಮಗಾರಿಗೆ ವೆಚ್ಚ ಭರಿಸಬಹುದಲ್ಲವೇ ಎಂದು ಸಭೆಯ ಗಮನಕ್ಕೆ ತಂದರು. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಮಾತನಾಡಿ ಸದರಿ ಅನುದಾನವನ್ನು ಬಾಲಭವನ ಕಟ್ಟಡ ಅಭಿವೃದ್ಧಿಗೆ ಬಳಸಿಕೊಂಡಲ್ಲಿ (ಷೇರು) ಅನುದಾನ ಸದ್ಬಳಕೆ ಆಗುತ್ತದೆ, ಆದುದರಿಂದ ಎಲ್ಲರೂ ಒಪ್ಪುವುದಾದರೆ ಸದರಿ ಅನುದಾನವನ್ನು ಇಡೀ ಜಿಲ್ಲೆಗೆ ಬಾಲಭವನ ಅಭಿವೃದ್ಧಿಗೆ ಬಳಸಿಕೊಳ್ಳಬಹುದು ಹಾಗೂ ಈ ಕುರಿತು ಮುಂದಿನ ಸಾಮಾನ್ಯ ಸಭೆಯಲ್ಲಿ ನಿರ್ಣಯ ಕೈಗೊಂಡ ನಂತರ ಮುಂದಿನ ಕ್ರಮಕೈಗೊಳ್ಳಬಹುದು ಎಂದು ಸಭೆಗೆ ತಿಳಿಸಿದರು.

ಶಿಕ್ಷಣ ಮತ್ತು ಆರೋಗ್ಯ ಸ್ಥಾಯಿ ಸಮಿತಿ ಅಧ್ಯಕ್ಷರು ಮಾತನಾಡಿ ನಾಟಕ ತಂಡಗಳಿಗೆ ಸಹಾಯ ಧನ ನೀಡಲು ಯಾವ ಮಾನದಂಡವನ್ನು ಅನುಸರಿಸಲಾಗುತ್ತಿದೆ ಎಂದು ಪ್ರಶ್ನಿಸಿದರು. ಪ್ರತಿಯಾಗಿ ಸಹಾಯಕ ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇವರು ಮಾತನಾಡಿ, ಒಂದು ತಾಲ್ಲೂಕಿಗೆ ಎರಡು ತಂಡಗಳಿಗೆ ತಲಾ ರೂ. 20 ಸಾವಿರದಂತೆ ಒಟ್ಟು ರೂ. 40 ಸಾವಿರಗಳನ್ನು ನೀಡಲಾಗುವುದು, ಆದರೆ ಈಗ ನಾಟಕ ತಂಡಗಳ ಸಂಖ್ಯೆ ಹೆಚ್ಚಾಗಿರುವುದರಿಂದ ಪ್ರಸ್ತುತ ಒಂದು ತಂಡಕ್ಕೆ ರೂ. 10 ಸಾವಿರದಂತೆ ಒಂದು ತಾಲ್ಲೂಕಿನ 4-5 ನಾಟಕ ತಂಡಗಳಿಗೆ ಸಹಾಯ ಧನ ನೀಡಲಾಗುತ್ತಿದೆ ಎಂದು ತಿಳಿಸಿದರು.

**(ಕ್ರಮ: ಸಹಾಯಕ ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ )**

**17) ಅಕ್ಷರ ದಾಸೋಹ:**

ಶಿಕ್ಷಣಾಧಿಕಾರಿ, ಅಕ್ಷರ ದಾಸೋಹ ಇವರು ಮಾತನಾಡಿ, ಕಾರ್ಯಕ್ರಮದ ಪ್ರಗತಿ ಮಾಹಿತಿಯನ್ನು ಸಭೆಗೆ ವಿವರಿಸಿದರು. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಮಾತನಾಡಿ ಅಕ್ಷರ ದಾಸೋಹ ಕಾರ್ಯಕ್ರಮದಡಿ ಕಳೆದ ಒಂದೂವರೆ ತಿಂಗಳುಗಳಿಂದ ಪಾವಗಡ ತಾಲ್ಲೂಕಿನ ಕೆಲುವು ಕಡೆ ಅಡುಗೆ ಪ್ರಾರಂಭ ಮಾಡಿಲ್ಲವೆಂದು ತಮಗೆ ದೂರವಾಣಿ ಮುಖೇನ ದೂರು ಬಂದಿರುವುದಾಗಿ ತಿಳಿಸಿದರು. ಪ್ರತಿಯಾಗಿ ಶಿಕ್ಷಣಾಧಿಕಾರಿ, ಅಕ್ಷರ ದಾಸೋಹ ಇವರು ಮಾತನಾಡಿ, ಪಾವಗಡ ತಾಲ್ಲೂಕಿನ ಕೆ.ರಾಂಪುರ ಗ್ರಾಮದಲ್ಲಿ ಗಲಾಟೆಯಾಗಿ ಅಡುಗೆ ಪ್ರಾರಂಭ ಮಾಡಿರಲಿಲ್ಲ, ಈಗ ಪ್ರಾರಂಭವಾಗಿದೆ ಎಂದು ತಿಳಿಸಿದರು. ನಂತರ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಮಾತನಾಡಿ ಅಕ್ಷರ ದಾಸೋಹ ಕಾರ್ಯಕ್ರಮದ ಕರ್ತವ್ಯ ನಿರ್ಲಕ್ಷ್ಯತೆಗಾಗಿ ಪಾವಗಡ ತಾಲ್ಲೂಕಿನ ಅಕ್ಷರ ದಾಸೋಹ ಸಹಾಯಕ ನಿರ್ದೇಶಕರಿಗೆ ಕಾರಣ ಕೇಳಿ ನೋಟೀಸ್ ಜಾರಿಗೊಳಿಸಲು ಶಿಕ್ಷಣಾಧಿಕಾರಿ, ಅಕ್ಷರ ದಾಸೋಹ ಇವರಿಗೆ ತಿಳಿಸಿದರು ಹಾಗೂ ಕಾರ್ಯಕ್ರಮ ಉಸ್ತುವಾರಿ ನಿರ್ಲಕ್ಷ್ಯತೆಗಾಗಿ ಶಿಕ್ಷಣಾಧಿಕಾರಿ, ಅಕ್ಷರ ದಾಸೋಹ ಇವರಿಗೆ ಕಾರಣ ಕೇಳಿ ನೋಟೀಸ್ ಜಾರಿಗೊಳಿಸಲು ಉಪ ಕಾರ್ಯದರ್ಶಿ(ಆಡಳಿತ) ಇವರಿಗೆ ತಿಳಿಸಿದರು.

**(ಕ್ರಮ: ಶಿಕ್ಷಣಾಧಿಕಾರಿ, ಅಕ್ಷರ ದಾಸೋಹ, ಉಪ ಕಾರ್ಯದರ್ಶಿ(ಆಡಳಿತ) ಜಿಲ್ಲಾ ಪಂಚಾಯತ್)**

**18) ಆರೋಗ್ಯ ಇಲಾಖೆ:**

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು ಮಾತನಾಡಿ, ಇಲಾಖಾ ಕಾರ್ಯಕ್ರಮಗಳ ಬಗ್ಗೆ ಸಭೆಗೆ ವಿವರಿಸಿದರು. ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ ಅಧ್ಯಕ್ಷರು ಮಾತನಾಡಿ ನಕಲಿ ವೈದ್ಯಾಧಿಕಾರಿಗಳನ್ನು ಪತ್ತೆ ಹಚ್ಚಿದ್ದೀರಾ? ಎಂದು ಪ್ರಶ್ನಿಸಿದರು, ಪ್ರತಿಯಾಗಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು ಮಾತನಾಡಿ ಅದಕ್ಕಾಗಿ ಒಂದು ಸಮಿತಿಯಿದ್ದು, ಸದರಿ ಸಮಿತಿಗೆ ಈ ಕಾರ್ಯವನ್ನು ವಹಿಸಲಾಗಿದೆ ಎಂದು ತಿಳಿಸಿದರು. ಶಿಕ್ಷಣ ಮತ್ತು ಆರೋಗ್ಯ ಸ್ಥಾಯಿ ಸಮಿತಿ ಅಧ್ಯಕ್ಷರು ಮಾತನಾಡಿ ಇಲಾಖೆಯಲ್ಲಿರುವ ಖಾಲಿ ಹುದ್ದೆಗಳ ಮಾಹಿತಿ ಪಡೆದರು.

**(ಕ್ರಮ: ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು, ತುಮಕೂರು)**

**19) ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ:**

ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಇವರು ಮಾತನಾಡಿ, ಇಲಾಖಾ ಕಾರ್ಯಕ್ರಮಗಳ ಬಗ್ಗೆ ಸಭೆಗೆ ವಿವರಿಸಿದರು.

**(ಕ್ರಮ: ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ತುಮಕೂರು)**

**20) ಜಲಾನಯನ ಅಭಿವೃದ್ಧಿ ಇಲಾಖೆ:-**

ಜಿಲ್ಲಾ ಜಲಾನಯನ ಅಭಿವೃದ್ಧಿ ಅಧಿಕಾರಿಗಳು ವಿವರ ನೀಡಿ ಸಮಗ್ರ ಜಲಾನಯನ ನಿರ್ವಹಣಾ ಯೋಜನೆ ಕಾರ್ಯಕ್ರಮದಡಿ ಭೌತಿಕ/ಆರ್ಥಿಕವಾಗಿ ಶೇಕಡ 96ರಷ್ಟು ಪ್ರಗತಿಯಾಗಿದ್ದು, ಜಲಸಿರಿ ಯೋಜನೆ ಅಡಿ ಶೇಕಡ 100ರಷ್ಟು ಪ್ರಗತಿಯಾಗಿದೆ ಎಂದು ತಿಳಿಸಿದರು.

**21) ವಯಸ್ಕರ ಶಿಕ್ಷಣ:**

ಜಿಲ್ಲಾ ವಯಸ್ಕರ ಶಿಕ್ಷಣಾಧಿಕಾರಿಗಳು ಮಾತನಾಡಿ, ಇಲಾಖಾ ಕಾರ್ಯಕ್ರಮಗಳ ಬಗ್ಗೆ ಸಮಗ್ರ ಮಾಹಿತಿಯನ್ನು ಸಭೆಗೆ ವಿವರಿಸಿದರು. ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ ಅಧ್ಯಕ್ಷರು ಮಾತನಾಡಿ ತಾಲ್ಲೂಕು ಸಂಯೋಜಕರಿಗೆ ಜವಬ್ದಾರಿ ವಹಿಸಿ ಶೌಚಾಲಯ ನಿರ್ಮಾಣ ಮಾಡಿಸಲು ಜಿಲ್ಲಾ ವಯಸ್ಕರ ಶಿಕ್ಷಣಾಧಿಕಾರಿಗಳಿಗೆ ಸೂಚಿಸಿದ್ದಾಗ್ಯೂ ಇದುವರೆಗೂ ಯಾವುದೇ ಕ್ರಮವಹಿಸಿರುವುದಿಲ್ಲವೆಂದು ಆಕ್ಷೇಪ ವ್ಯಕ್ತಪಡಿಸಿದರು. ಪ್ರತಿಯಾಗಿ ಜಿಲ್ಲಾ ವಯಸ್ಕರ ಶಿಕ್ಷಣಾಧಿಕಾರಿಗಳು ಮಾತನಾಡಿ ಈ ಕುರಿತು ಕ್ರಮವಹಿಸಲಾಗಿದ್ದು, ತಾಲ್ಲೂಕು ಸಂಯೋಜಕರುಗಳು ಕಾರ್ಯಪ್ರವೃತ್ತರಾಗಿರುವುದಾಗಿ ಸಭೆಗೆ ತಿಳಿಸಿದರು. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಮಾತನಾಡಿ, ದಿನಾಂಕ 16-12-2013ರಂದು ಬೆಳಗ್ಗೆ 11.00 ಗಂಟೆಗೆ ತಾಲ್ಲೂಕು ಸಂಯೋಜಕರುಗಳನ್ನು ಕರೆಸಿ ಫಲಾನುಭವಿಗಳ ಪಟ್ಟಿ ಮಾಡಿಸಿಕೊಡುವಂತೆ ಜಿಲ್ಲಾ ವಯಸ್ಕರ ಶಿಕ್ಷಣಾಧಿಕಾರಿಯವರಿಗೆ ತಿಳಿಸಿದರು.

**(ಕ್ರಮ: ಜಿಲ್ಲಾ ವಯಸ್ಕರ ಶಿಕ್ಷಣಾಧಿಕಾರಿಗಳು, ತುಮಕೂರು)**

**22. ಸಮಾಜ ಕಲ್ಯಾಣ:**

ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಗಳು ಮಾತನಾಡಿ, ಇಲಾಖಾ ಕಾರ್ಯಕ್ರಮಗಳ ಬಗ್ಗೆ ಸಮಗ್ರ ಮಾಹಿತಿಯನ್ನು ಸಭೆಗೆ ವಿವರಿಸಿದರು.

ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ ಮಾನ್ಯ ಅಧ್ಯಕ್ಷರು ಮಾತನಾಡಿ, ಇಲಾಖಾ ಹಾಸ್ಟಲ್ ಕಟ್ಟಡಗಳ ನಿರ್ಮಾಣಕ್ಕಾಗಿ ಸರ್ಕಾರ ಕೋಟ್ಯಾಂತರ ರೂಪಾಯಿಗಳ ಅನುದಾನ ನೀಡಿದರೂ ಸಹ ಕಳೆದ ಸಾಲಿನ ಕಾಮಗಾರಿಗಳು ಈವರೆವಿಗೂ ಪ್ರಾರಂಭವಾಗಿಲ್ಲದಿರುವ ಬಗ್ಗೆ ಹಾಗೂ ಕಾಮಗಾರಿ ಬಿಲ್ ಗಳು ಸಕಾಲದಲ್ಲಿ ಪಾವತಿಯಾಗದಿರುವ ಬಗ್ಗೆ ತೀವ್ರ ಅಸಮಧಾನ ವ್ಯಕ್ತಪಡಿಸಿದರು. ಮುಂದುವರೆದು ಮಾತನಾಡಿ ನಿರ್ಮಿತಿ ಕೇಂದ್ರ ಮತ್ತು KRIDL ರವರಿಗೆ ವಹಿಸಲಾಗಿರುವ ಕಾಮಗಾರಿಗಳನ್ನು ಡಿಸೆಂಬರ್ ಅಂತ್ಯದೊಳಗೆ ಪೂರ್ಣಗೊಳಿಸಲು ಕ್ರಮವಹಿಸಬೇಕು; ತಾಲ್ಲೂಕು ಸಮಾಜ ಕಲ್ಯಾಣಾಧಿಕಾರಿಗಳು ಪಟ್ಟಿ ಪಡೆದು ಪರಿಶೀಲಿಸಿ ಅಗತ್ಯ ಕ್ರಮವಹಿಸಬೇಕು ಎಂದು ತಿಳಿಸಿದರು.

ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿಗಳು ಮಾತನಾಡಿ, TSP ಕಾರ್ಯಕ್ರಮದಡಿ ಶೇ.55ರಷ್ಟು ಪ್ರಗತಿ ಸಾಧಿಸಲಾಗಿದೆ; Line department ಗಳಿಗೆ ಪ್ರಸಕ್ತ ಮಾಸಾಂತ್ಯದಲ್ಲಿ ನಿಗಧಿಪಡಿಸಿರುವ ಕಾಮಗಾರಿಗಳನ್ನು ಪೂರ್ಣಗೊಳಿಸಲು ಕ್ರಮವಹಿಸಲಾಗುವುದು ಎಂದು ಸಭೆಗೆ ತಿಳಿಸಿದರು.

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಮಾತನಾಡಿ, TSP ಪ್ರಗತಿಯನ್ನು follow up ಮಾಡಬೇಕು; SCP & TSP ಅಡಿ ಪ್ರಸಕ್ತ ಮಾಸಾಂತ್ಯದಲ್ಲಿ ಪೂರ್ಣ ಪ್ರಮಾಣದ ಪ್ರಗತಿಯಾಗದಿದ್ದಲ್ಲಿ ಉಳಿಕೆ ಅನುದಾನವನ್ನು ಹೊಸ legislationಗೆ ನೀಡಲಾಗುವುದು ಎಂದು ತಿಳಿಸಿದರು.

**(ಕ್ರಮ: ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಗಳು ಮತ್ತು ಪ.ಪಂಗಡ ಕಲ್ಯಾಣಾಧಿಕಾರಿಗಳು)**

**23. ಬಿ.ಸಿ.ಎಂ.:**

ಜಿಲ್ಲಾ ಅಧಿಕಾರಿ, ಬಿ.ಸಿ.ಎಂ.ರವರು ಮಾತನಾಡಿ, ಇಲಾಖಾ ಕಾರ್ಯಕ್ರಮಗಳ ಬಗ್ಗೆ ಸಮಗ್ರ ಮಾಹಿತಿಯನ್ನು ಸಭೆಗೆ ವಿವರಿಸಿದರು.

**24. ಡಾ: ಅಂಬೇಡ್ಕರ್ ಅಭಿವೃದ್ಧಿ ನಿಗಮ:**

ಜಿಲ್ಲಾ ಡಾ: ಅಂಬೇಡ್ಕರ್ ಅಭಿವೃದ್ಧಿ ನಿಗಮದ ಅಧಿಕಾರಿರವರು ಮಾತನಾಡಿ, ಇಲಾಖಾ ಕಾರ್ಯಕ್ರಮಗಳ ಬಗ್ಗೆ ಸಮಗ್ರ ಮಾಹಿತಿಯನ್ನು ಸಭೆಗೆ ವಿವರಿಸುತ್ತಾ, ಜಿಲ್ಲೆಯಲ್ಲಿ ಈವರೆವಿಗೆ ಒಟ್ಟು 264 ಕೊಳವೆಬಾವಿಗಳು ವಿದ್ಯುದ್ದೀಕರಣಕ್ಕೆ ಬಾಕಿ ಇದ್ದು, ಈ ಪೈಕಿ ಪ್ರಸಕ್ತ ಮಾಸಾಂತ್ಯದೊಳಗೆ 150 ಕೊಳವೆಬಾವಿಗಳು ಮತ್ತು ಮುಂದಿನ ಮಾಸಾಂತ್ಯದೊಳಗೆ 114 ಕೊಳವೆಬಾವಿಗಳನ್ನು ವಿದ್ಯುದ್ದೀಕರಣಗೊಳಿಸಿ ಪ್ರಕರಣವನ್ನು ಮುಕ್ತಾಯಗೊಳಿಸಲಾಗುವುದೆಂದು ಸಭೆಗೆ ತಿಳಿಸಿದರು.

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಮಾತನಾಡಿ, ಬೆಸ್ಕಾಂ ವತಿಯಿಂದ ಬಾಕಿ ಉಳಿದಿರುವ 191 ಪ್ರಕರಣಗಳನ್ನು ದಿನಾಂಕ : 31-01-2014ರೊಳಗಾಗಿ ವಿದ್ಯುದ್ದೀಕರಣ ಗೊಳಿಸಲು ಕಟ್ಟು-ನಿಟ್ಟಿನ ಕ್ರಮವಹಿಸಲು ಬೆಸ್ಕಾಂ ಅಧಿಕಾರಿಗಳಿಗೆ ತಿಳಿಸಿದರು.

**25 ಪರಿಶಿಷ್ಟ ಪಂಗಡಗಳ ಅಭಿವರದ್ಧಿ ನಿಗಮ:**

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು ಮಾತನಾಡಿ, ಬೆಸ್ಕಾಂ ವತಿಯಿಂದ ಬಾಕಿ ಉಳಿದಿರುವ 113 ಪ್ರಕರಣಗಳನ್ನು ದಿನಾಂಕ : 31-12-2013ರೊಳಗಾಗಿ ವಿದ್ಯುದ್ದೀಕರಣ ಗೊಳಿಸಲು ಕಟ್ಟು-ನಿಟ್ಟಿನ ಕ್ರಮವಹಿಸಲು ಬೆಸ್ಕಾಂ ಅಧಿಕಾರಿಗಳಿಗೆ ತಿಳಿಸಿದರು.

**26 ಬಿ.ಸಿ.ಎಂ. ಅಬಿವೃದ್ಧಿ ನಿಗಮ:**

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು ಮಾತನಾಡಿ, ಬೆಸ್ಕಾಂ ವತಿಯಿಂದ ಬಾಕಿ ಉಳಿದಿರುವ 57 ಪ್ರಕರಣಗಳನ್ನು ದಿನಾಂಕ : 31-12-2013ರೊಳಗಾಗಿ ವಿದ್ಯುದ್ದೀಕರಣ ಗೊಳಿಸಲು ಕಟ್ಟು-ನಿಟ್ಟಿನ ಕ್ರಮವಹಿಸಲು ಬೆಸ್ಕಾಂ ಅಧಿಕಾರಿಗಳಿಗೆ ತಿಳಿಸಿದರು.

**27. ಅಲ್ಪ ಸಂಖ್ಯಾತರ ಅಭಿವೃದ್ಧಿ ನಿಗಮ:**

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು ಮಾತನಾಡಿ, ಬೆಸ್ಕಾಂ ವತಿಯಿಂದ ಬಾಕಿ ಉಳಿದಿರುವ 12 ಪ್ರಕರಣಗಳನ್ನು ದಿನಾಂಕ : 31-12-2013ರೊಳಗಾಗಿ ವಿದ್ಯುದ್ದೀಕರಣ ಗೊಳಿಸಲು ಕಟ್ಟು-ನಿಟ್ಟಿನ ಕ್ರಮವಹಿಸಲು ಬೆಸ್ಕಾಂ ಅಧಿಕಾರಿಗಳಿಗೆ ತಿಳಿಸಿದರು. ಮುಂದುವರೆದು ಮಾತನಾಡಿ, ಈ ವರ್ಷದ ಪ್ರಕರಣಗಳನ್ನು ಹೊರತುಪಡಿಸಿ, ವಿದ್ಯುದ್ದೀಕರಣದ ಸಲುವಾಗಿ ಹಿಂದಿನ ಸಾಲುಗಳ ಯಾವುದೇ ಪ್ರಕರಣಗಳು ಬಾಕಿ ಇರದಂತೆ ಕಟ್ಟು-ನಿಟ್ಟಿನ ಕ್ರಮವಹಿಸಿ ದಿ.11-01-2014ರೊಳಗಾಗಿ ಎಲ್ಲಾ ಪ್ರಕರಣಗಳನ್ನು ಪೂರ್ಣಗೊಳಿಸಬೇಕೆಂದು ಕಟ್ಟು-ನಿಟ್ಟಿನ ಸೂಚನೆ ನೀಡಿದರು. ಮುಂದುವರೆದು ಮಾತನಾಡುತ್ತಾ, ಕುಡಿಯುವ ನೀರು ಯೋಜನೆಗೆ ಸಂಬಂಧಿಸಿದಂತೆ ಬೆಸ್ಕಾಂ ಮೂರು ವಿಭಾಗಗಳು ಮತ್ತು ಪಂ.ರಾ.ಇಂ.ವಿಭಾಗಗಳ ವತಿಯಿಂದ ಬಾಕಿ ಇರುವ ಎಲ್ಲಾ ಪ್ರಕರಣಗಳನ್ನು ದಿ.31-12-2013ರೊಳಗೆ ಪೂರ್ಣಗೊಳಿಸಿ ಸಂಬಂಧಪಟ್ಟವರಿಗೆ ಹಸ್ತಾಂತರಿಸಲು ಅಗತ್ಯ ಕ್ರಮವಹಿಸುವಂತೆ ತಿಳಿಸಿದರು.

**28 ಆಹಾರ ಮತ್ತು ನಾಗರಿಕ ಸರಬರಾಜು:**

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು ಮಾತನಾಡಿ, ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಗೆ ಸಂಬಂಧಿಸಿದಂತೆ ಪಡಿತರ ಚೀಟಿ ಮಂಜೂರಾತಿ ಕೋರಿ ಗ್ರಾ.ಪಂ/ತಾ.ಪಂ.ವಾರು ಎಷ್ಟು ಅರ್ಜಿಗಳು ಬಂದಿವೆ? ಅದರಂತೆ ಗ್ರಾ.ಪಂ/ತಾಲ್ಲೂಕುವಾರು ಎಷ್ಟು ಪಡಿತರ ಚೀಟಿಗಳನ್ನು ನೀಡಲಾಗಿದೆ? ಇನ್ನು ಎಷ್ಟು ಅರ್ಜಿಗಳು ಬಾಕಿ ಉಳಿದಿವೆ ಎಂಬುದರ ಬಗ್ಗೆ

ದಿನಾಂಕ;16-12-2013ರಂದು ಮಧ್ಯಾಹ್ನ 3-00ಗಂಟೆಗೆ ನಡೆಯಲಿರುವ ಸಭೆಗೆ ವಿವರವಾದ ವರದಿಯನ್ನು ನೀಡುವಂತೆ ಉಪ ನಿರ್ದೇಶಕರಿಗೆ ತಿಳಿಸಿದರು.

**(ಕ್ರಮ: ಉಪನಿರ್ದೇಶಕರು, ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ)**

**29. ಅರಣ್ಯ:**

ಉಪ ಅರಣ್ಯ ಸಂರಕ್ಷಣಾಧಿಕಾರಿ, ಸಾಮಾಜಿಕ ಅರಣ್ಯ ರವರು ಮಾತನಾಡಿ, ಇಲಾಖೆಯ ಕಾರ್ಯಕ್ರಮಗಳ ಪ್ರಗತಿ ಬಗ್ಗೆ ಸಭೆಗೆ ವಿವರಿಸುತ್ತಾ, ಜಿಲ್ಲೆಯಲ್ಲಿ 3,57,000 ವಿವಿಧ ಜಾತಿಯ ಸಸಿಗಳನ್ನು ರೈತರ ಜಮೀನಿನಲ್ಲಿ ನೆಡಲಾಗಿದೆ; ಆವುಗಳ ರಕ್ಷಣೆಗೆ 2 ವರ್ಷಗಳ ಅವಧಿಗೆ NREGA ಕಾರ್ಯಕ್ರಮದ ಅಡಿ ಅವಕಾಶ ಕಲ್ಪಿಸಲಾಗಿರುತ್ತದೆ; ರೈತರು ತಮ್ಮ ಹೊಲ ಮತ್ತು ತೋಟಗಳಲ್ಲಿ ಗಿಡಗಳನ್ನು ಬೆಳೆಸಲು ಉಸ್ತುಕರಾಗಿರುತ್ತಾರೆ; ಪ್ರಸ್ತುತ ಜಿಲ್ಲೆಯಲ್ಲಿ Teak, Silver ಮತ್ತು ಹೆಬ್ಬೇವಿನ ಸಸಿಗಳಿಗೆ ಹೆಚ್ಚಿನ ಬೇಡಿಕೆ ಇದ್ದು, ಸಸಿಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ಬೆಳೆಸಲು ವ್ಯವಸ್ಥೆ ಮಾಡಲಾಗುತ್ತಿದೆ ಎಂದು ಸಭೆಗೆ ತಿಳಿಸಿದರು.

**30. ಸಣ್ಣ ನೀರಾವರಿ:**

ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ಇವರು ಮಾತನಾಡಿ, ಇಲಾಖಾ ಕಾರ್ಯಕ್ರಮಗಳೊಟ್ಟಿಗೆ SCP/TSP ಕಾರ್ಯಕ್ರಮಗಳ ಗುರಿ ಮತ್ತು ಸಾಧನೆ , ಶೇಕಡವಾರು ಅಂಶಗಳ ಬಗ್ಗೆ ಸಭೆಗೆ ವಿವರವಾದ ಮಾಹಿತಿ ನೀಡಿದರು.

**31. ವಸತಿ:**

ಯೋಜನಾ ನಿರ್ದೇಶಕರು, ಡಿ.ಆರ್.ಡಿ.ಎ. ರವರು ಮಾತನಾಡಿ ಈ ವರ್ಷ ಬಸವ ವಸತಿ ಯೋಜನೆಯಡಿ 12430 ಮನೆಗಳು ಮಂಜೂರಾಗಿದ್ದು, ಈ ಮೇರೆಗೆ ಕುಣಿಗಲ್-89, ಮಧುಗಿರಿ-49, ಪಾವಗಡ-390, ತಿಪಟೂರು-86, ತುಮಕೂರು-98, ತುರುವೇಕೆರೆ-85 ಫಲಾನುಭವಿಗಳ ಪಟ್ಟಿ ಜಿ.ಪಂ.ಗೆ ಸಲ್ಲಿಕೆಯಾಗಬೇಕಾಗಿರುತ್ತದೆ; ಬಸವ ವಸತಿ ಮತ್ತಿ ಇಂದಿರಾ ಅವಾಜ್ ಯೋಜನೆಗೆ ಸಂಬಂಧಿಸಿದಂತೆ ಒಟ್ಟು 815 ಫಲಾನುಭವಿಗಳ ಪಟ್ಟಿ ವಿವಿಧ ತಾಲ್ಲೂಕುಗಳಿಂದ ಜಿ.ಪಂ.ಗೆ ಸಲ್ಲಿಕೆಯಾಗಬೇಕಾಗಿರುತ್ತದೆ ಎಂದು ತಿಳಿಸಿದರು.

**32. ಎಸ್.ಜಿ.ಎಸ್.ವೈ:**

ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ ಅಧ್ಯಕ್ಷರು ಮಾತನಾಡಿ, ಕುಣಿಗಲ್ ತಾಲ್ಲೂಕಿನ ಕೆ.ಹೊನ್ನಮಾಚನಹಳ್ಳಿ ಮತ್ತು ನಡೆಮಾವಿನಪುರ ಗ್ರಾಮಗಳಲ್ಲಿ ಎಸ್.ಜಿ.ಎಸ್.ವೈ. ಯೋಜನೆಯು ಸ್ಥಗಿತಗೊಂಡಿದ್ದು ಪಾವತಿಗೆ ಬಾಕಿ ಇರುವ ಪ್ರಕರಣಗಳನ್ನು ಯಾವ ರೀತಿಯಲ್ಲಿ ಇತ್ಯರ್ಥಪಡಿಸುತ್ತೀರಿ ಎಂದು ಪ್ರಶ್ನಿಸಿದರು? ಪ್ರತಿಯಾಗಿ ಯೋಜನಾ ನಿರ್ದೇಶಕರು, ಡಿ.ಆರ್.ಡಿ.ಎ. ರವರು ಮಾತನಾಡಿ, ಸದರಿ ಬಾಕಿ ಮೊತ್ತವನ್ನು NRLM ಅಡಿ ಭರಿಸಲು ಸಮಾಲೋಚಿಸಲಾಗುವುದು ಎಂದು ತಿಳಿಸುತ್ತಾ, ಸದರಿ ಯೋಜನೆಯ ರೂಪು-ರೇಷೆಗಳು ಹಾಗೂ ತತ್ಸಂಬಂದ ಈವರೆಗೆ ಕೈಗೊಳ್ಳಲಾಗಿರುವ ಕ್ರಮಗಳ ಕುರಿತು ಸಭೆಗೆ ಸವಿವರವಾಗಿ ತಿಳಿಸಿದರು.

**33. ಅಂಗವಿಕಲರ ಕಲ್ಯಾಣಾ ಭಿವೃದ್ಧಿ ಇಲಾಖೆ:**

ಜಿಲ್ಲಾ ಅಂಗವಿಕಲ ಕಲ್ಯಾಣಾಧಿಕಾರಿಗಲು, ಮಾತನಾಡಿ, ಇಲಾಖಾ ಕಾರ್ಯಕ್ರಮಗಳ ಪ್ರಗತಿ ಕುರಿತು ಸಭೆಗೆ ಮಾಹಿತಿ ಒದಗಿಸಿದರು.

**34. ಯುವಜನ ಸೇವೆ ಮತ್ತು ಕ್ರೀಡಾ ಇಲಾಖೆ:**

ಸಹಾಯಕ ನಿರ್ದೇಶಕರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ರವರು ಮಾತನಾಡಿ, ಇಲಾಖಾ ಕಾರ್ಯಕ್ರಮಗಳ ಪ್ರಗತಿ ಕುರಿತು ಸಭೆಗೆ ಮಾಹಿತಿ ಒದಗಿಸಿದರು.

**35. ಕೈಮಗ್ಗ ಮತ್ತು ಜವಳಿ:**

ಉಪ ನಿರ್ದೇಶಕರು, ಕೈಮಗ್ಗ ಮತ್ತು ಜವಳಿ ರವರು ಮಾತನಾಡಿ, ಕೈಮಗ್ಗಗಳು KHDC Coverage ಅಡಿ ಶೇ.87ರಷ್ಟು, ಕಾರ್ಯನಿರತ ಮಗ್ಗಗಳು ಕಾರ್ಯಕ್ರಮದಡಿ ಶೇ.99ರಷ್ಟು ಮತ್ತು ರೇಷ್ಮೆ ಸೀರೆ ಬಟ್ಟೆ ಉತ್ಪಾದನೆ ಕಾರ್ಯಕ್ರಮದಡಿ ಶೇ.88ರಷ್ಟು ಭೌತಿಕ ಗುರಿ ಸಾಧಿಸಲಾಗಿರುತ್ತದೆ ಎಂದು ಸಭೆಗೆ ತಿಳಿಸಿದರು.

**36. ರೇಷ್ಮೆ:**

ಉಪ ನಿರ್ದೇಶಕರು, ರೇಷ್ಮೆಇಲಾಖೆ ಇವರು ಮಾತನಾಡಿ, ಖಚ್ಚಾ ರೇಷ್ಮೆ ಉತ್ಪಾದನೆ ಕಾರ್ಯಕ್ರಮದಡಿ ಶೇ.69.54ರಷ್ಟು, ದ್ವಿತಳಿ ರೇಷ್ಮೆ ಉತ್ಪಾದನೆ ಕಾರ್ಯಕ್ರಮದಡಿ ಶೇ.122.31ರಷ್ಟು ಭೌತಿಕ ಪ್ರಗತಿ ಸಾಧಿಸಲಾಗಿದ್ದು, ಏಪ್ರಿಲ್ ನಿಂದ ಆಗಸ್ಟ್ ಮಾಹೆಯವರೆಗೆ ಮಳೆಯ ತೀವ್ರ ಅಭಾವದಿಂದ ರೇಷ್ಮೆ ಗೂಡಿನ ಉತ್ಪಾದನೆ ಕುಂಠಿತವಾಗಿರುತ್ತದೆ; ಈಗ ಮಿಶ್ರ ತಳಿ ರೇಷ್ಮೆಗೂಡನ್ನು ದ್ವಿತಳಿಗೆ divert ಮಾಡಲಾಗುತ್ತಿದೆ; ತಾ.ಪಂ. ಕಾರ್ಯಕ್ರಮಗಳಾದ SCP & TSPಗೆ ಸಂಬಂಧಿಸಿದಂತೆ SCP ಅಡಿ 5.90 ಲಕ್ಷ ರೂ. ನಿಗಧಿಯಾಗಿದ್ದು ಈವರೆಗೆ ರೂ.3.65ಲಕ್ಷ ಬಿಡುಗಡೆಯಾಗಿದ್ದು, ರೂ.2.70ಲಕ್ಷ ವೆಚ್ಚ ಮಾಡಲಾಗಿರುತ್ತದೆ; ಅದರಂತೆ TSP ಅಡಿ ರೂ.2.55ಲಕ್ಷ ನಿಗಧಿಯಾಗಿದ್ದು ಈವರೆಗೆ ರೂ.1.55ಲಕ್ಷ ಬಿಡುಗಡೆಯಾಗಿದ್ದು ರೂ.1.44ಲಕ್ಷ ಖರ್ಚಾಗಿ ಶೇ.71ರಷ್ಟು ಪ್ರಗತಿಯಾಗಿರುತ್ತದೆ; NREGA ಅಡಿ 159 ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದ್ದು, ಈವರೆವಿಗೆ 119 ಕಾಮಗಾರಿಗಳು ಪೂರ್ಣಗೊಂಡಿದ್ದು, ಈ ಪೈಕಿ 40 ಕಾಮಗಾರಿಗಳಿಗೆ ಬಿಲ್ ಪಾವತಿಸಲಾಗಿರುತ್ತದೆ ಎಂದು ಸಭೆಗೆ ತಿಳಿಸಿದರು.

ಚರ್ಚಿಸುವ ವಿಷಯಗಳು ಮುಕ್ತಾಯವಾದ್ದರಿಂದ ಮುಖ್ಯ ಯೋಜನಾಧಿಕಾರಿ ರವರ ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯ ಗೊಳಿಸಲಾಯಿತು.

ಸಹಿ/-
(ಗೋವಿಂದರಾಜು)
ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು,
ಜಿಲ್ಲಾ ಪಂಚಾಯತ್, ತುಮಕೂರು

ಸಹಿ/-
( ಸಾಕಮ್ಮ ನಾಗರಾಜು )
ಅಧ್ಯಕ್ಷರು,
ಜಿಲ್ಲಾ ಪಂಚಾಯತ್, ತುಮಕೂರು

ಸಂ.ಜಿಪತು/ಯೋಶಾ/ಕೆಡಿಪಿ ನಡವಳಿ/1/2013-14

ಜಿಲ್ಲಾ ಪಂಚಾಯತ್ ಕಾರ್ಯಾಲಯ
ಯೋಜನಾ ಶಾಖೆ,
ತುಮಕೂರು, ದಿನಾಂಕ:30-12-2013

ದಿನಾಂಕ:13-12-2013ರಂದು ಮಾನ್ಯ ಜಿಲ್ಲಾ ಪಂಚಾಯತ್ ಅಧ್ಯಕ್ಷರ ಅಧ್ಯಕ್ಷತೆಯಲ್ಲಿ ನಡೆ 2013-14ನೇ ಸಾಲಿನ ಕೆ.ಡಿ.ಪಿ.ಪ್ರಗತಿ ಪರಿಶೀಲನಾ ಸಭೆಯ ನಡವಳಿಗಳನ್ನು ಮಾಹಿತಿಗಾಗಿ ಹಾಗೂ ಮುಂದಿ ಕ್ರಮಕ್ಕಾಗಿ ಕಳುಹಿಸಿಕೊಡಲಾಗಿದೆ.

ಪ್ರತಿಯನ್ನು ಮಾಹಿತಿಗಾಗಿ ಮತ್ತು ಅಗತ್ಯ ಕ್ರಮಕ್ಕಾಗಿ:

1. ಮಾನ್ಯ ಅಧ್ಯಕ್ಷರು,ಜಿಲ್ಲಾ ಪಂಚಾಯತ್, ತುಮಕೂರು ಇವರ ಆಪ್ತ ಶಾಖೆಗೆ.
2. ಮಾನ್ಯ ಉಪಾಧ್ಯಕ್ಷರು, ಜಿಲ್ಲಾ ಪಂಚಾಯತ್, ತುಮಕೂರು ಇವರ ಆಪ್ತ ಶಾಖೆಗೆ
3. ಜಿಲ್ಲಾ ಪಂಚಾಯಿತಿಯ ವಿವಿಧ ಸ್ಥಾಯಿ ಸಮಿತಿಗಳ ಮಾನ್ಯ ಅಧ್ಯಕ್ಷರುಗಳಿಗೆ.
4. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ತುಮಕೂರು ರವರ ಆಪ್ತ ಶಾಖೆಗೆ.
5. ಸಂಬಂಧಿಸಿದ ಎಲ್ಲಾ ಜಿಲ್ಲಾಮಟ್ಟದ ಅಧಿಕಾರಿಗಳಿಗೆ ಕಳುಹಿಸುತ್ತಾ ತಮ್ಮ ಇಲಾಖಾ ವ್ಯಾಪ್ತಿಗೆ ಸಂಬಂಧಿಸಿದ ವಿಷಯಗಳಿಗೆ ಪೂರಕ ಅನುಸರಣಾ ವರದಿಗಳನ್ನು ಮರುಟಪಾಲಿನಲ್ಲಿ ಕಳುಹಿಸಿಕೊಡಲು ಸೂಚಿಸಿದೆ.
6. ಜಿಲ್ಲಾ ಪಂಚಾಯತ್ ನ ವಿವಿಧ ಶಾಖೆಗಳ ಮುಖ್ಯಸ್ಥರುಗಳಿಗೆ
7. ಜಿಲ್ಲೆಯ ಎಲ್ಲಾ ತಾಲ್ಲೂಕು ಪಂಚಾಯ್ತಿಗಳ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ.

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಪರವಾಗಿ,
ಜಿಲ್ಲಾ ಪಂಚಾಯತ್, ತುಮಕೂರು.